ಅಧ್ಯಕ್ಷರು : ಅದು ನೀವು ಕಾಮೆಂಟ್ ಮಾಡಿ. ನೀವೇ ಕಾಮೆಂಟ್ ಮಾಡಿ ಏನು ಹೇಳಬೇಕೋ, ಮಂಗಳಾರತಿ ಏನು ಎತ್ತಬೇಕೋ ಎತ್ತಿ ಇವರಿಗೆ. ನನ್ನ ಬಾಯಿಂದ ಏಕೆ ಬರಬೇಕು. ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆಯಿತು, ನಾವು ನಿಮಗೆ ಇರಿಸು ಮುರಿಸು ಮಾಡುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಹೊಸ ಮಂತ್ರಿಮಂಡಲ ರಚನೆಯಾದ ಮೇಲೂ ಮಂತ್ರಿಗಳಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ ಈಗ ಬೆಳೆಸುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ಸದನವನ್ನು ನಡೆಸುವುದು...

ಅಧ್ಯಕ್ಷರು : ಅದನ್ನು ಮುಂದುವರೆಸುವುದು ಬೇಡ, ಏಕೆಂದರೆ ಒಟ್ಟಿನಲ್ಲಿ ಹೇಳುತ್ತೇನೆ ನನಗೂ ಬೇಜಾರಾಗಿದೆ. ಟೈಂ ವೇಸ್ಟ್ ಮಾಡುವುದು ಬೇಡ, ಮಾತನಾಡಿ.

8. ನಿಲುವಳಿ ಸೂಚನೆಗೆ ಅನುಮತಿ ಕೋರಿಕೆಯ ಬಗ್ಗೆ ಮುಂದುವರೆದ ಚರ್ಚೆ
ವಿಷಯ: ಬಿ.ಎಂ.ಐ.ಸಿ.ಯೋಜನೆ ಬಗ್ಗೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ನಾನು ಬಹಳ ಮುಖ್ಯವಾಗಿ ಹೇಳಬೇಕಾಗಿರುವಂತಹ ಪ್ರಿಲಿಮಿನರಿ ಸಬ್‌ಮಿಷನ್, ಡಿಟೈಲ್‌ಗೆ ನಾನು ಹೋಗುವುದಿಲ್ಲ. ಒಂದು ರಾಜಕೀಯ ಬಿಕ್ಕಟ್ಟು ಉಂಟಾಗಿರುವುದು ಏಕೆಂದರೆ ಆ ಬಿಎಂಐಸಿ ಯೋಜನೆ ಬಗ್ಗೆ ಸರ್ಕಾರದ ಮಧ್ಯೆ ಸಾಮರಸ್ಯ ಇಲ್ಲದೆ ಭಿನ್ನಾಭಿಪ್ರಾಯ ಬಂದು ಕ್ಯಾಬಿನೆಟ್ ಮೀಟಿಂಗ್ ನಡೆಯಲಾರದಂತಹ ಸ್ಥಿತಿಗೆ ನಿರ್ಮಾಣ ಮಾಡಿ ತಂದಿರುವಂತಾದ್ದು ರಾಜಕೀಯ ಬಿಕ್ಕಟ್ಟು ಎಂದು ಹೇಳುವುದು ನನ್ನ ಒಂದನೇ ಪಾಯಿಂಟ್. ಎರಡನೇ ಪಾಯಿಂಟ್ ಆ ರಾಜಕೀಯ ಬಿಕ್ಕಟ್ಟಿನ ಪರಿಣಾಮ ಮೂರು ದಿವಸ ಈ ಸದನದ ಸಮಯವನ್ನು ಹಾಳು ಮಾಡಿದೆ ಎಂದು ನಾವು ತಿಳಿಯಬೇಕಾಗಿದೆ. ಇನ್ನು ಮೂರನೆಯ ಮುಖ್ಯವಾದ ಪಾಯಿಂಟ್ ಇರತಕ್ಕಂಥಾದ್ದು, ಸರ್ಕಾರ ನಡೆಸತಕ್ಕಂಥ ಎರಡು ಪಕ್ಷಗಳು ಏನಿವೆ ಅವರದ್ದು ಒಂದೊಂದು ದಿಕ್ಕಾಗಿದೆ. ಒಬ್ಬರದ್ದು ಒಂದು ದಿಕ್ಕು, ಇನ್ನೊಬ್ಬರದ್ದು ಇನ್ನೊಂದು ದಿಕ್ಕಾಗಿದೆ. ಹಾಗಾಗಿ ಈ ರಾಜ್ಯದಲ್ಲಿ ಸರ್ಕಾರ ಇದೆಯೋ ಇಲ್ಲವೋ, ಸರ್ಕಾರ ಇದ್ದರೆ ಈ ಪರಿಸ್ಥಿತಿ ಏಕೆ ನಿರ್ಮಾಣವಾಯಿತು ಎನ್ನುವಂಥಾದ್ದು ಬಹಳ ಮುಖ್ಯವಾದ ಪ್ರಶ್ನೆ. ಏಕೆಂದರೆ ಇದು ರಾಜ್ಯವನ್ನು ಕಾಡುತ್ತಿರತಕ್ಕಂಥ ಸಮಸ್ಯೆ.

ಇಡೀ ರಾಜ್ಯದ ಆಡಳಿತ ವ್ಯವಸ್ಥೆ ಹಾಗೂ ಆಡಳಿತ ಯಂತ್ರದ ಮೇಲೆ ಬೇಳತಕ್ಕಂಥ ಪರಿಣಾಮ ಇವೆಲ್ಲಾ. ಯಾವಾಗ ಅಧಿಕಾರ ನಡೆಸುವವರು ಎರಡು ಗುಂಪಾಗಿ ಭಿನ್ನವಾದಂತಹ ಅಭಿಪ್ರಾಯವನ್ನು ತೆಗೆದುಕೊಂಡಾಗ, ಆ ಆಡಳಿತ ಯಂತ್ರದ ಮೇಲೆ ಹೊಡೆತ ಬೀಳುತ್ತದೆ. ಮತ್ತೆ ಬಹಳ ಮುಖ್ಯವಾಗಿ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂದನಂತರ ಆಗಿರತಕ್ಕಂಥ ಪರಿಣಾಮಗಳಿಂದ ನಾವು ಏಕೆಂದರೆ ಹಿಂದಕ್ಕೆ ಹೋಗುವುದಿಲ್ಲ ನಾವು, ಈ ನಿಲುವಳಿ ಸೂಚನೆಯನ್ನು ಈವತ್ತು ತರಬೇಕಾಗಿ ಬಂತು, ಹಿಂದಕ್ಕೆ ಇದರ ಬಗ್ಗೆ ಸುಮಾರು ಚರ್ಚೆಯಾಗಿದೆ. ದಿನಾಂಕ 20.4.06 ರಂದು ಸುಪ್ರೀಂ ಕೋರ್ಟ್ ಕೊಟ್ಟಂತಹ ಜಡ್ಜ್‌ಮೆಂಟ್ ನಂತರ ಕರ್ನಾಟಕ ರಾಜ್ಯದಲ್ಲಿ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ, ಸುಪ್ರೀಂ ಕೋರ್ಟ್‌ನವರು ನೈಸ್ ಕಂಪನಿ ಪರವಾಗಿ ಜಡ್ಜ್‌ಮೆಂಟ್ ಕೊಟ್ಟು ಬಿಟ್ಟಿದ್ದಾರೆ, ಇನ್ನು ಯಾರೂ ಆ ನೈಸ್ ಕಂಪನಿಯನ್ನು ಪ್ರಶ್ನೆ ಮಾಡುವಂತಹ ಅವಕಾಶವೇ ಇಲ್ಲ, ಆ ಕಂಪನಿಯವರು ಏನು ಹೇಳುತ್ತಾರೆ ಹಾಗೆ ಸರ್ಕಾರ, ಈ ರಾಜ್ಯ ಎಲ್ಲರೂ ನಡೆಯಬೇಕು ಎನ್ನುವಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ ಮಾನ್ಯ ಅಧ್ಯಕ್ಷರೇ ಅದಕ್ಕೆ ನಾನು ಉದಾಹರಣೆಯನ್ನು ಹೇಳುತ್ತೇನೆ. ಜೂನ್ 12ನೇ ತಾರೀಖು ಸರ್ಕಾರಕ್ಕೆ ನೈಸ್ ಕಂಪನಿಯಿಂದ ಒಂದು ಪತ್ರ ಬರೆದಿದ್ದಾರೆ. ಆದರೆ ನಾನು ಆ ಪತ್ರವನ್ನು ಪೂರ್ತಿಯಾಗಿ ಓದುವುದಿಲ್ಲ. ಆ ಮನುಷ್ಯ ಎಷ್ಟು ಈ ಸರ್ಕಾರವನ್ನು ಗೇಲಿ ಮಾಡಿದ್ದಾನೆ, ಅವಹೇಳನ ಮಾಡಿದ್ದಾನೆ, ನೀವು ಎಷ್ಟು ದಡ್ಡರು ಸರ್ಕಾರದಲ್ಲಿರುವವರು ಎಂದು ಹೇಳುತ್ತಾನೆ ಎಂದರೆ, Sir under our constitutional scheme, judgements rendered by the Supreme Court of India on Law of the land Article 142 of the Constitution of India provide for enforcement of decrees and orders of the Supreme Court and reads as under:- ಎಂದರೆ ಕನಿಷ್ಟ ಪರಿಜ್ಞಾನ ಕೂಡ ಈ ಸರ್ಕಾರಕ್ಕೆ ಇಲ್ಲ ಎಂದು ಹೇಳುತ್ತಿದ್ದಾನೆ. ಸುಪ್ರೀಂ ಕೋರ್ಟ್ ಆರ್ಡರನ್ನು ಜಾರಿ ಮಾಡುವಂತಹ ಕನಿಷ್ಟ ಪರಿಜ್ಞಾನವೂ ಕೂಡ ಸರ್ಕಾರಕ್ಕೆ ಇಲ್ಲವೆಂದು ಹೇಳುತ್ತಾನೆ ಒಂದು ಕಡೆ. ಇನ್ನೊಂದು ಕಡೆ ಅದಕ್ಕಿಂತ ವರ್ಸ್ಟ್ ಆಗಿ Article 144 is very crucial and provides as under:- 144 civil and crucial authorities to act in aid of the Supreme Court. All authorities civil and judicial in the territory of India shall act in the aid of the Supreme Court, ಅಂತ ಸರ್ಕಾರ ನಡೆಸತಕ್ಕಂಥವರಿಗೆ, ಸರ್ಕಾರದಲ್ಲಿ

ಇರುವಂತಹ ಅಧಿಕಾರಿಗಳಿಗೆ ಸೆಕ್ಷನ್ 144ರಲ್ಲಿ ಏನಿದೆ ಎಂದು ಅವನು ಜ್ಞಾಪಕ ಮಾಡಿಕೊಡುತ್ತಾನೆ ಎಂದರೆ, how he is teasing this Government. What extent he is insulting this Government, ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ಮತ್ತೆ ಅವನು ಇನ್ನೊಂದು ಕಡೆ ಹೇಳುತ್ತಾನೆ. ಒಂದು ಬ್ರಿಟಿಷ್ ಕೋರ್ಟ್ ಜಡ್ಜ್‌ಮೆಂಟ್ ಅನ್ನು ಕೋಟ್ ಮಾಡುತ್ತಾ, ಏನು ಹೇಳುತ್ತಾರೆಂದರೆ "The king is under no man, but God and the Law," was the reply of Chief Justice of England, Sir Edward Pope. ಅಂದರೆ ಇದು ಪ್ರಜಾಪ್ರಭುತ್ವ ಎಂಬುದನ್ನು ಆತನು ಮರೆತು ಹೋಗಿದ್ದಾನೆ. ಇದು ಹಿಂದೆ ಇಂಗ್ಲೆಂಡ್‌ನಲ್ಲೋ ಅಥವಾ ಬ್ರಿಟಿಷರು ಪ್ರಜಾಪ್ರಭುತ್ವ ಇಲ್ಲದೇ ಇರುವಂತಹ ಸಂದರ್ಭದಲ್ಲಿ ರಾಜರು ಅಧಿಕಾರವನ್ನು ನಡೆಸುತ್ತಿದ್ದಂತಹ ಸಂದರ್ಭದಲ್ಲಿ King is a man from God. ಆದುದರಿಂದ ರಾಜನು ಹೇಳಿದ್ದೇ ಕಾನೂನು ಎಂದು ಹೇಳುತ್ತಾನೆ. ಇವತ್ತು ಇದು ಪ್ರಜಾಪ್ರಭುತ್ವ, ಈ ಪ್ರಜಾಪ್ರಭುತ್ವದಲ್ಲಿ 5 ಕೋಟಿ ಜನರಿಂದ ಆಯ್ಕೆಯಾಗಿ ಇಲ್ಲಿ ಪ್ರತಿನಿಧಿಗಳು ನಾವೆಲ್ಲಾ ಬಂದಿರುವಂಥಾದ್ದು. ನಾವೆಲ್ಲಾ ಸೇರಿ ಈ ಸದನವನ್ನು, ಈ ಸರ್ಕಾರವನ್ನು ರಚನೆ ಮಾಡಿರು ವಂಥಾದ್ದು. ಇದು ಪ್ರಜಾಪ್ರಭುತ್ವವೆಂದು ಬರೆದು ಬಿಟ್ಟು The King is under no man -- ಅಂದರೆ ಮನುಷ್ಯರ ಅಧೀನದಲ್ಲಿ ದೊರೆ ಇಲ್ಲ. ಅಂದರೆ ಈ ಸರ್ಕಾರ ಜನರದ್ದು ಅಲ್ಲವೆಂದು ಹೇಳತಕ್ಕಂಥ ಉದ್ಧಟತನವನ್ನು ಅವನು ತೋರಿಸುತ್ತಿದ್ದಾನೆ. ಅಂದರೆ ಇಷ್ಟೆಲ್ಲಾ ಮಾಡಿದಾಗಲೂ ಕೂಡ ಈ ಸರ್ಕಾರ, ಈ ನಾಚಿಕೆಗೆಟ್ಟ ಸರ್ಕಾರ. ಸುಮ್ಮನೆ ಕಣ್ಣುಮುಚ್ಚಿಕೊಂಡು ಏನೂ ಮಾಡದೇ ಕುಳಿತಿದೆ. ಅಂದರೆ ಇಲ್ಲಿ ಒಂದು ಕಂಪನಿ ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಹೊಡೆಯುವುದಕ್ಕೆ ಯೋಜನೆಯನ್ನು ಹಾಕಿರುವಂತಹ ಒಂದು ಕಂಪೆನಿ, ಇಡೀ ಸರ್ಕಾರವನ್ನು ಐದು ಕೋಟಿ ಜನರಿಂದ ಆಯ್ಕೆಯಾಗಿರುವಂತಹ ಪ್ರತಿನಿಧಿಗಳನ್ನು ಅವನು ಅವಹೇಳನವನ್ನು ಮಾಡುತ್ತಿದ್ದರೆ, ಇವತ್ತು ಅವನು ನಮ್ಮನ್ನು ಗೇಲಿ ಮಾಡುತ್ತಿದ್ದರೆ, ಈ ಸರ್ಕಾರ ಇನ್ನೂ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಆದುದರಿಂದ ಇವರು ಸರ್ಕಾರವನ್ನು ನಡೆಸುವುದಕ್ಕೆ ಲಾಯಕ್ ಇದ್ದಾರಾ ಎಂಬುದು ನನ್ನ ಪ್ರಶ್ನೆ. ಇನ್ನು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಏನು ಹೇಳಿದೆಯೆಂದರೆ, ಅವರು ಬಾರಿ ಕ್ಲಿಯರ್ ಆಗಿ ಹೇಳಿದ್ದಾರೆ. ಇದನ್ನು ನಾವು ಒಂದು ಕಡೆ ಕೋಟ್ ಮಾಡಿ ಹೇಳಿದ್ದೇವೆ. ಈ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಏನು ಹೇಳಿದೆಯೆಂದರೆ;

"In the result, we find that the judgment of the High Court dated 3.5.2005 impugned before us in the main matter is not liable to be interfered with. There is no merit in the appeals and they are hereby dismissed."

ಅಂದರೆ ಇದರ ಅರ್ಥ ಏನು? ದಿನಾಂಕ 3.5.2005ನೇ ಇಸವಿಯಲ್ಲಿ ಹೈಕೋರ್ಟ್ ಕೊಟ್ಟಿರುವಂತಹ ಜಡ್ಜ್‌ಮೆಂಟ್ ಅದು ಯಾವುದೆಂದರೆ, Somsekhar Reddy Vs. State of Karnataka ಇದು ಕೊಟ್ಟಿರುವಂತಹ ಜಡ್ಜ್‌ಮೆಂಟ್, ಏಕೆಂದರೆ ಸೋಮಶೇಖರ್‌ರೆಡ್ಡಿಯ ಕೇಸ್ ಅನ್ನು upheld - - ಮಾಡಿ, ಅವರು ಹೇಳಿದ್ದಾರೆ;; before us main matter is not liable to be interfered... ಹಾಗಾದರೆ ಅದರ ಅರ್ಥ ಏನು? ಸೋಮಶೇಖರ್ ರೆಡ್ಡಿಯ ಕೇಸ್‌ನಲ್ಲಿ ಯಾವ ರೀತಿಯಾದ ತೀರ್ಮಾನವನ್ನು ಹೈಕೋರ್ಟ್ ಕೊಟ್ಟಿದೆ, ಅದನ್ನು ಅವರು ಎತ್ತಿ ಹಿಡಿದಿದ್ದಾರೆನ್ನುವಂಥಾದ್ದು ನಾವು ಇಲ್ಲಿ ನೋಡಬೇಕು. ಸೋಮಶೇಖರ್‌ರೆಡ್ಡಿಯ ಕೇಸ್‌ನಲ್ಲಿ ಅವರು ಕೊಟ್ಟಿರುವಂತಹ ಜಡ್ಜ್‌ಮೆಂಟ್ ಏನು? ನಾನು ಅದರ ವಿವರಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು: ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರೆ, ತಾವು ಪ್ರಿಲಿಮಿನರಿ ಸಬ್‌ಮಿಷನ್ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಪ್ರಿಲಿಮಿನರಿ ಸಬ್‌ಮಿಷನ್‌ಗೆ ಹೇಳುತ್ತಿದ್ದೇನೆ. ನಾನು ಡಿಟೈಲ್ಸ್‌ಗೆ ಹೋಗುತ್ತಾ ಇಲ್ಲ. ಸೋಮಶೇಖರ್ ರೆಡ್ಡಿಯವರ ಕೇಸ್‌ನಲ್ಲಿ ಕೋರ್ಟ್ ಏನು ಜಡ್ಜ್‌ಮೆಂಟ್ ಅನ್ನು ಕೊಟ್ಟಿದೆಯೆಂದರೆ,

"Government to charge conversion fee for converting the user for the land from agriculture and non-agriculture purpose. Under the project, Respondent No.2 has to construct a 162 Kms. of road requiring 6,999 acres, details of which are as follows; Express Highway - 111Kms. includes interchanges, toll plazas etc., 4,522 acres

peripheral road - 41 kms. 2,193 acres, Link road - 9.8 Kms. Altogether putting 6,999 acres."

ಸುಪ್ರೀಂ ಕೋರ್ಟ್ ಏನು ಹೇಳಿದೆ? ಈ ಜಡ್ಜ್‌ಮೆಂಟ್‌ನಲ್ಲಿ ನಾವು ಇಂಟರ್‌ಫಿಯರ್ ಆಗುವುದಿಲ್ಲ; ಏಕೆಂದರೆ ಸೋಮಶೇಖರ್ ರೆಡ್ಡಿಯವರ ಕೇಸ್‌ನಲ್ಲಿ ಹೈಕೋರ್ಟ್ ಕೊಟ್ಟಿರುವಂತಹ ಜಡ್ಜ್‌ಮೆಂಟ್

"No point of time Company or Government cannot go beyond the framework agreement."

ಫ್ರೇಮ್‌ವರ್ಕ್ ಅಗ್ರಿಮೆಂಟ್‌ನಲ್ಲಿ ನೀವು ಏನು ಡಿಟೈಲ್ ಅನ್ನು ಕೊಟ್ಟಿದ್ದೀರಿ, ಅದರ ಪ್ರಕಾರವೇ ನೀವು ನಡೆಯಬೇಕಾಗಿರುವಂಥಾದ್ದು. What does the framework Agreement say? ಫ್ರೇಮ್ ವರ್ಕ್ ಅಗ್ರಿಮೆಂಟ್‌ನಲ್ಲಿ ಇವರು ಲ್ಯಾಂಡ್ ಅಲಾಟ್ ಮಾಡುವಾಗ ಯಾವ ರೀತಿಯಾಗಿ ಅಲಾಟ್ ಮಾಡಿದ್ದಾರೆಂದರೆ, ಹೈಕೋರ್ಟ್‌ನಲ್ಲಿ ಸೋಮಶೇಖರ್ ರೆಡ್ಡಿಯವರ ಕೇಸ್‌ನಲ್ಲಿ ಯಾವ ರೀತಿಯಾಗಿ ಪಾರ್ಟಿಷನ್ ಮಾಡಿ ಕೊಟ್ಟಿದ್ದಾರೆ, ಅದೇ ರೀತಿಯಲ್ಲಿ ಫ್ರೇಮ್‌ವರ್ಕ್ ಅಗ್ರಿಮೆಂಟ್‌ನಲ್ಲೂ ಕೂಡ ಲ್ಯಾಂಡ್ ಅನ್ನು ಕೊಟ್ಟಿರುವಂಥಾದ್ದು. ಫ್ರೇಮ್ ವರ್ಕ್ ಅಗ್ರಿಮೆಂಟ್‌ನಲ್ಲಿ 111ಕಿಲೋ ಮೀಟರ್ ಇಷ್ಟು ಜಮೀನು ಎಂದು ತಿಳಿಸಿದ್ದಾರೆ. ನಾನು ಆಗಲೇ ಹೇಳಿದಂತೆ same statistics. Peripheral ರೋಡ್‌ಗೂ ಅಷ್ಟೆ. ನಾನು ಏನು ಹೇಳಿದ್ದೇನೆ, ಅಷ್ಟೇ ಅದರಲ್ಲಿ ಕೊಟ್ಟಿರುವಂಥಾದ್ದು. "ಈ ಫ್ರೇಮ್ ವರ್ಕ್ ಅಗ್ರಿಮೆಂಟ್ ಪ್ರಕಾರ, ನೀವು beyond frame work Agreement ನೈಸ್ ಕಂಪೆನಿಯಾಗಲಿ, ಸರ್ಕಾರವಾಗಲಿ, ಪರ್ಮಿಷನ್ ಕೊಡಬಾರದೆಂದು ಹೇಳಿರುವಂಥಾದ್ದು. ಆದರೆ ಈ ಫ್ರೇಮ್ ವರ್ಕ್ ಅಗ್ರಿಮೆಂಟ್ ಅನ್ನು violate ಮಾಡಿ, ಅವರು ಇವತ್ತು ಲ್ಯಾಂಡ್ ಅನ್ನು ಕೇಳುತ್ತಿರುವಂಥಾದ್ದು. Peripheral ರೋಡ್‌ಗೆ 2,471 ಎಕರೆಗಳು ಬೇಕು. ಈಗಾಗಲೇ ಅವರಿಗೆ ಗೌವರ್ನಮೆಂಟ್ ಎಷ್ಟು ಕೊಟ್ಟಿದೆಯೆಂದರೆ ಕೆ.ಐ.ಡಿ.ಬಿ.ಯಿಂದ 1,117 ಎಕರೆಯನ್ನು ಒಂದು ಐಟಂಗೆ ಕೊಟ್ಟಿದೆ. 1,777 ಎಕರೆ ಇನ್ನೊಂದು ಐಟಂಗೆ ಕೊಟ್ಟಿದೆ. All putting together is 2,583 acres; Actually, ಫ್ರೇಮ್ ವರ್ಕ್ ಅಗ್ರಿಮೆಂಟ್‌ನಲ್ಲಿ 2,471 ಎಕರೆಗಳು ಇರುವಂಥಾದ್ದು. Already 483 acres excess land ಕೊಟ್ಟಿದ್ದಾರೆ. ಆದರೆ ಮತ್ತೆ ನೈಸ್ ಕಂಪೆನಿಯವರು ಮತ್ತೆ ಕೇಳುತ್ತಿರುವಂಥಾದ್ದು; ಇದರ ಜೊತೆಗೆ ಇನ್ನೂ 5,338 ಎಕರೆ ಜಮೀನನ್ನು ಕೊಡಬೇಕು ನೀವು ಎಂದು ಕೇಳುತ್ತಿದ್ದಾರೆ. ಈಗಾಗಲೇ

ಕೊಟ್ಟಿರುವಂತಹ ಎಕ್ಸೆಸ್ ಲ್ಯಾಂಡ್ ಜೊತೆಗೆ, ಇನ್ನೂ ಐದು ಸಾವಿರ ಚಿಲ್ಲರೆ ಎಕರೆ ಜಮೀನು ಬೇಕೆಂದು ಡಿಮಂಡ್ ಮಾಡುತ್ತಿರುವಂತಹ ಸಂದರ್ಭದಲ್ಲಿ, ಅದರ ಒಟ್ಟು Peripheral road 41 Kms. ಏನು ಕನ್‌ಸ್ಟ್ರಕ್ಷನ್ ಮಾಡಬೇಕೆಂದು ಇದೆ, ಅದಕ್ಕೆ ಬೇಕಾಗಿರುವಂತಹ ಲ್ಯಾಂಡ್ 2,471 ಎಕರೆ ಅದಕ್ಕಿಂತ ಹೆಚ್ಚಿಗೆ....

ಅಧ್ಯಕ್ಷರು : ಮಾನ್ಯ ಶ್ರೀರಾಮನೆಡ್ಡಿಯವರೆ, ತಾವು ಅವನು ಹೆಚ್ಚಿಗೆ ಲ್ಯಾಂಡ್ ಕೊಡಬೇಕೆಂದು ಕೇಳುತ್ತಿದ್ದಾನೆಂದು ಹೇಳಿದ್ದೀರಿ. ಅವನು ಯಾವ ಆಧಾರದ ಮೇಲೆ ಆತ ಆ ಲ್ಯಾಂಡ್ ಅನ್ನು ಕೊಡಬೇಕೆಂದು ಕೇಳುತ್ತಿದ್ದಾನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ತಾವು ಡಿಟೈಲ್ ಬೇಡವೆಂದು ಹೇಳಿದ್ದೀರಿ. ಅದಕ್ಕೆ ನಾನು ಹೇಳಲಿಲ್ಲ.

ಅಧ್ಯಕ್ಷರು : ಆ ವಿಷಯ ಬಹಳ ಮುಖ್ಯವಾದದ್ದು; ಇದನ್ನು ಅವನು ಯಾವ ಆಧಾರದ ಮೇಲೆ ಕೇಳುತ್ತಿದ್ದಾನೆ? ಅವನು ಕೇಳುತ್ತಿದ್ದಾನೆಂಬುದು ಕತೆಯಾಗುತ್ತದೆ. ಈ ಕಾರಣದಿಂದ ಅಥವಾ ಈ ಸರ್ಕಾರ ಒಂದು ಅಗ್ರಿಮೆಂಟ್ ಮಾಡಿಕೊಂಡಿದೆಯೆಂದರೆ ಯಾವ ಕಾರಣಕ್ಕೋಸ್ಕರ ಎಂದು ತಿಳಿಯ ಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಅವನು ಯಾವ ಆಧಾರದ ಮೇಲೆ ಕೇಳುತ್ತಿದ್ದಾನೆಂದರೆ, ಫ್ರೇಮ್ ವರ್ಕ್ ಅಗ್ರಿಮೆಂಟ್ ಆದಮೇಲೆ, ಮೂರು ಗೌವರ್ನಮೆಂಟ್ ಆರ್ಡರ್ಸ್ ಆಗಿದೆ. ಆ ಮೂರು ಗೌವರ್ನಮೆಂಟ್ಸ್ ಆರ್ಡರ್ಸ್‌ನಲ್ಲಿ ಏನೇನು ಹೇಳಿದ್ದಾರೆಂದರೆ ಮೊದಲನೆಯದರಲ್ಲಿ Expert Committee has recommended.... Originally seven townships ಬೇಕೆಂದು ಕೇಳಿದ್ದು, ಮತ್ತೆ 111 ಕಿಮೀ ಎಕ್ಸ್‌ಪ್ರೆಸ್ ಹೈವೇ with 41 Kms. of Peripher al road, ಎಲ್ಲಾ ಸೇರಿ, ಆತನಿಗೆ ನೆಸಿಸಿಟಿ ಇರುವಂಥಾದ್ದು 20,193 ಎಕರೆ; ಆದರೆ 29,000 ಎಕರೆಯನ್ನು ನೋಟಿಫೈ ಮಾಡಿದರು. ಅದನ್ನು ಮತ್ತೆ ತೆಗೆದರು, ಫ್ರೇಮ್ ವರ್ಕ್ ಅಗ್ರಿಮೆಂಟ್ ಆದಮೇಲೆ then Government has made three Government Orders to allow him to sell the land, invest money for construction of road. ನನಗೆ ನೀವು ಈಗ ಕೊಟ್ಟಿರುವಂತಹ ಅಗ್ರಿಮೆಂಟ್ ಪ್ರಕಾರ, ನಾನು five townships ಅನ್ನು ಕಟ್ಟಿ ರೋಡ್ ಮಾಡಿದರೆ ನನಗೆ ಲಾಭ ಬರುವುದಿಲ್ಲ, 30 ವರ್ಷಗಳು ಟೋಲ್ ಕಲೆಕ್ಷನ್ ಮಾಡಿದರೆ, ನನಗೆ ಲಾಸ್ ಆಗುತ್ತದೆ, ಲಾಭ ಬರಬೇಕೆಂದರೆ ನೀವು ಎಕ್ಸೆಸ್ ಲ್ಯಾಂಡ್ ಅನ್ನು ನನಗೆ ಮಾರಾಟ ಮಾಡುವುದಕ್ಕೆ ಅನುಮತಿಯನ್ನು ಕೊಡಬೇಕೆಂದು ಆತನು

4.00 ಪಿಎಂ

ಬೇಡಿಕೆಯನ್ನು ಇಟ್ಟಿದ್ದಾನೆ. ಆ ಬೇಡಿಕೆಯನ್ನು ಮನ್ನಿಸಿ ಫ್ರೇಮ್ ವರ್ಕ್ ಅಗ್ರಿಮೆಂಟ್ ಅನ್ನು violate ಮಾಡಿ, the then existing Government 1999ರ ನಂತರ ಬಂದಂಥ ಸರ್ಕಾರ ಏನು ಮಾಡಿತು, ಮೂರು ಗೌವರ್ನಮೆಂಟ್ ಆರ್ಡರ್ ಅನ್ನು ಮಾಡಿ violating the expert Committee advise, they allowed him to sell that land.

ಅಧ್ಯಕ್ಷರು : ನಾನು ಕೇಳುತ್ತಿರುವುದೇನೆಂದರೆ, ಅವನು 2000 ಎಕರೆಯೋ, 3000 ಎಕರೆಯೋ ಎಕ್ಸಸ್ ಲ್ಯಾಂಡ್ ಕೇಳುತ್ತಿದ್ದಾನೆ ಎಂದು ಹೇಳಿದಿರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಲಾಭ ಬೇಕು ಎಂದು ಅವನು ಕೇಳುತ್ತಿದ್ದಾನೆ.

ಅಧ್ಯಕ್ಷರು : ಹಾಗಲ್ಲ, ಅವನೇನೋ ಎಕ್ಸಸ್ ಲ್ಯಾಂಡ್ ಬೇಕು ಎಂದು ಕೇಳಿದ. ಅದನ್ನು ಕೊಡಬಹುದು ಎಂದು ಗವರ್ನಮೆಂಟ್ ಆರ್ಡರ್ ಆಗಿದೆಯಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವನು ಯಾವ ಬೇಸಿಸ್‌ನಲ್ಲಿ ಕೇಳುತ್ತಿದ್ದಾನೆಂದರೆ...

ಅಧ್ಯಕ್ಷರು : ಮಾರಾಟ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ ಎಂದು ನೀವು ಹೇಳುತ್ತಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಏಕೆ ಅವನಿಗೆ ಅವಕಾಶ ಕೊಟ್ಟರು ಎಂದರೆ....

ಅಧ್ಯಕ್ಷರು : ಹೆಚ್ಚಿಗೆ ಎಷ್ಟು ಜಮೀನನ್ನು ಕೊಡುವುದಕ್ಕೆ ಆರ್ಡರ್ ಮಾಡಿದ್ದಾರೆ? ಆ ಬಗ್ಗೆ ಅವನ ಜೊತೆ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆಯೇ ಎನ್ನುವುದು ಇದ್ದರೆ ಅದನ್ನು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದನ್ನೇ ಈಗ ನಾನು ಹೇಳುತ್ತಿರುವುದು. ಎಕ್ಸ್‌ಪರ್ಟ್ ಕಮಿಟಿ ರೆಕಮಂಡೇಷನ್‌ನಲ್ಲಿ ಇವನಿಗೆ ಇಷ್ಟು ಭೂಮಿ ಬೇಕು ಎಂದು ಹೇಳಿದ್ದಾರೆ. ಈ ರೀತಿಯಲ್ಲಿ ರೋಡ್ ಕನ್‌ಸ್ಟ್ರಕ್ಟ್ ಮಾಡಿದರೆ ನನಗೆ ಲಾಸ್ ಆಗುತ್ತದೆ ಎಂದು ಅವನು ಮತ್ತೆ ಅಪೀಲ್ ಮಾಡಿದ. ಹಾಗಾಗಿ ನೀವು ನನಗೆ ಏಳು ಟೌನ್‌ಶಿಫ್‌ಗಳಿಗೆ ಇಷ್ಟು ಲ್ಯಾಂಡ್ ಕೊಡಬೇಕು ಎಂದು ಹೇಳಿದಾಗ, ಎಕ್ಸ್‌ಪರ್ಟ್ ಕಮಿಟಿ ಏನು ಮಾಡಿತೆಂದರೆ, with the consent of the Finance Department ಏಳು ಟೌನ್‌ಶಿಫ್ಸ್ ಬೇಡ, ನೀವು 5 ಟೌನ್‌ಶಿಫ್ಸ್ ಅನ್ನು ಕನ್‌ಸ್ಟ್ರಕ್ಟ್

ಮಾಡಿ. ಆ ಟೌನ್‌ಶಿಫ್ಸ್‌ಗಾಗಿ ಅಲಾಟ್ ಮಾಡುವ 3,600 ಎಕರೆ ಲ್ಯಾಂಡ್‌ನಲ್ಲಿ 45 ಪರ್ಸೆಂಟ್ ಪ್ರಾಪರ್ಟಿಯನ್ನು ನೀವು ಮಾರಿಕೊಳ್ಳಬಹುದು, 55 ಪರ್ಸೆಂಟನ್ನು ಗವರ್ನಮೆಂಟಿಗೆ ಬೂಟ್ ಆಧಾರದ ಮೇಲೆ ಬಿಟ್ಟುಕೊಡಬೇಕು ಎನ್ನುವ ರೆಕಮಂಡೇಷನ್ ಮಾಡಿದೆ. ಆದರೆ, ಅದನ್ನೂ ವಾಯ್‌ಲೇಟ್ ಮಾಡಿ, ಮೂರು ಗವರ್ನಮೆಂಟ್ ಆರ್ಡರ್ ಮಾಡಿ, ಮೊದಲನೆಯದಾಗಿ, they are permitted, No.1 - to sell the land, No.2 ಎರಡನೆಯದಾಗಿ, ಅದರಲ್ಲಿ 7,000 ಎಕರೆ ಗೌವರ್ನಮೆಂಟ್ ಲ್ಯಾಂಡನ್ನು ಕೊಟ್ಟಿದ್ದಾರೆ. ಪ್ರತಿ ಎಕರೆಗೆ 10 ರೂಪಾಯಿ ಪ್ರಕಾರ 40 ವರ್ಷಗಳಿಗೆ ಲೀಸ್‌ಗೆ ಕೊಟ್ಟಿದ್ದಾರೆ. ಆ ಜಮೀನನ್ನು ಅವನು ಐ ಸಿ ಐ ಸಿ ಐ ಬ್ಯಾಂಕಿಗೆ ಮಾರ್ಟಿಗೇಜ್ ಮಾಡಿ 150 ಕೋಟಿ ರೂಪಾಯಿಗಳ ಲೋನ್ ತೆಗೆದುಕೊಂಡಾಗ then Government has given a letter of confort, that is a counter guarantee. ಹಾಗಾಗಿ, ಆತನಿಗೆ ಎಕ್ಸೆಸ್ ಲ್ಯಾಂಡ್ ಕೊಡುತ್ತೇವೆ, ಅದನ್ನು ನೀನು ಮಾರಾಟ ಮಾಡಿಕೊಳ್ಳಬಹುದು ಎಂದು ಗವರ್ನಮೆಂಟ್ ಆರ್ಡರ್‌ಗಳ ಮುಖಾಂತರ ಪರ್ಮಿಷನ್ ಕೊಟ್ಟಿದ್ದು, ಆ ಲ್ಯಾಂಡನ್ನೇ ಇವತ್ತು ಅವನು ಡಿಮ್ಯಾಂಡ್ ಮಾಡುತ್ತಿರುವುದು. That is not in the framework agreement. ಸಬ್ಸಿಕ್ವೆಂಟ್ ಆಗಿ ಗವರ್ನಮೆಂಟ್ ಆರ್ಡರ್ಸ್ ಅನ್ನು ನೀವೇನು ಪಾಸ್ ಮಾಡಿದಿರಿ, ಅವುಗಳ ಪ್ರಕಾರ ನನಗೆ ಲ್ಯಾಂಡ್ ಕೊಡಿ ಎಂದು ಆತ ಕೇಳುತ್ತಿದ್ದಾನೆ. ಈಗ ಕೊಟ್ಟಿರತಕ್ಕಂಥ ಜಮೀನಿನಿಂದ ಏನಾಗುತ್ತದೆಂದರೆ, 41 ಕಿಲೋ ಮೀಟರ್ ಪೆರಿಫೆರಲ್ ರೋಡ್ ಮಾಡುತ್ತಾರೆ. ಅದರಲ್ಲಿ 9.8 ಕಿಲೋ. ಮೀಟರ್ ಲಿಂಕ್ ರೋಡ್ ಬರುತ್ತದೆ. ಹೀಗೆ, ಲಿಂಕ್ ರೋಡ್, ಇಂಟರ್‌ಚೇಂಜ್ ರೋಡ್‌ಗಳೆಲ್ಲಾ ಸೇರಿ ಮಾಡುವ 41 ಕಿ.ಮೀ. ರೋಡುಗಳಿಗೆ ಅವನು ಮೂರು ಕಂಪನಿಗಳಿಗೆ ಸಬ್ ಕಾಂಟ್ರಾಕ್ಟ್ ಕೊಟ್ಟಿದ್ದಾನೆ. ನೈಸ್ ಇಂಜಿನಿಯರಿಂಗ್ ಲಿಮಿಟೆಡ್ ಎಂದು ಹೇಳುವವರಿಗೆ 333 ಕೋಟಿ ರೂಪಾಯಿಗಳಿಗೆ ಸಬ್ ಕಾಂಟ್ರಾಕ್ಟ್ ಕೊಟ್ಟಿದ್ದಾನೆ. ಅದರ ಪ್ರಕಾರ ಅವನಿಗೆ ಒಂದು ಕಿ.ಮೀ.ಗೆ 5 ಕೋಟಿ 72 ಲಕ್ಷ ರೂಪಾಯಿ ಬೀಳುತ್ತದೆ. ಆದರೆ ಸರ್ಕಾರ ಮತ್ತು ಸಾರ್ವಜನಿಕರು ಅವನಿಗೆ ಒಂದು ಕಿ.ಮೀ. ರೋಡಿಗೆ ಎಷ್ಟು ಹಣವನ್ನು ಕೊಡುತ್ತಿದ್ದೇವೆಂದರೆ, 72 ಕೋಟಿ 46 ಲಕ್ಷ ರೂಪಾಯಿಗಳು; ಇದು ಹೇಗಿದೆ ನೋಡಿ. He is investing Rs. 5 crores 72 lakhs per Km. whereas we are giving Rs. 72 Crores 46 lakh rupees. according to that agreement. That means Rs. 69 Crore per Kms he is getting profit. Rs. 69 crore rupees multiplied by 41 Kms. is 2,843 crore rupees. ಅವನು ಬರೀ 41

ಕಿ.ಮೀ. ರೋಡ್ ಬಿಲ್ಟ್ ಮಾಡಿದರೆ ಅವನಿಗೆ ಸುಮಾರು 2,800 ಕೋಟಿ ರೂಪಾಯಿ ಲಾಭ ಬರುತ್ತದೆ. ಅದೇ ರೀತಿ, 111 ಕಿ.ಮೀ. ರೋಡ್ ಮಾಡಿದಾಗ, ಅದಕ್ಕೆ ಈ ಕಂಡೀಷನ್‌ಗಳನ್ನೆಲ್ಲಾ ಜಾರಿ ಮಾಡಿದರೆ ಅವನಿಗೆ ಎಷ್ಟು ಲಾಭ ಬರಬಹುದು ಎನ್ನತಕ್ಕಂಥಾದ್ದನ್ನು ಆಲೋಚನೆ ಮಾಡಿ. This is the crux of the whole issue. ಫ್ರೇಮ್‌ವರ್ಕ್ ಅಗ್ರಿಮೆಂಟ್ ಪ್ರಕಾರ ಹೋಗಲಿಕ್ಕೆ ಸರ್ಕಾರವೂ ತಕರಾರು ಮಾಡುವುದಿಲ್ಲ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಫ್ರೇಮ್‌ವರ್ಕ್ ಅಗ್ರಿಮೆಂಟನ್ನು ವಾಯ್‌ಲೇಟ್ ಮಾಡಿದಿರಿ ಎಂದು ನಾವು ಸುಪ್ರೀಂ ಕೋರ್ಟಿಗೆ ಅಪೀಲ್ ಹಾಕಿದ್ದೆವು. ಫ್ರೇಮ್‌ವರ್ಕ್ ಅಗ್ರಿಮೆಂಟನ್ನು ವಾಯ್‌ಲೇಟ್ ಮಾಡಿದಿರಿ ಎಂದೇ ನಾವು ಹೈಕೋರ್ಟಿಗೆ ರಿಟ್ ಪಿಟೀಷನ್ ಹಾಕಿದ್ದು. ಫ್ರೇಮ್‌ವರ್ಕ್ ಅಗ್ರಿಮೆಂಟ್ ಪ್ರಕಾರ ಹೋಗಬೇಕು ಎಂದು ನಾವು ಏನು ಹೇಳಿದ್ದೆವೋ, ಅದನ್ನು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಎತ್ತಿ ಹಿಡಿದೆ. ನೈಸ್ ಕಂಪನಿಯವನ ಪರವಾಗಿ ಕೇಸ್ ಆಗಿದೆ ಎಂದು ಇಲ್ಲಿ ಏನು ಪ್ರಚಾರವಾಗುತ್ತಿದೆ, ಅದು ಅಪ್ಪಟ ಸುಳ್ಳು. ತಾವು ಅವಕಾಶಕೊಟ್ಟರೆ, ನಾನು ಇಡೀ ಜಡ್ಜ್‌ಮೆಂಟನ್ನು ಓದಿ ಹೇಳುತ್ತೇನೆ.

ಅಧ್ಯಕ್ಷರು: ಮಾನ್ಯ ರೆಡ್ಡಿಯವರೆ, ಫ್ರೇಮ್‌ವರ್ಕ್ ಅಗ್ರಿಮೆಂಟ್ ಪ್ರಕಾರ ಅವನಿಗೆ 20,400 ಎಕರೆಯೋ ಎಷ್ಟೋ ಜಮೀನು ಕೊಡಬೇಕೆಂದು ಹೇಳಿದಿರಿ. ಅದನ್ನು ವಾಯ್‌ಲೇಟ್ ಮಾಡಿ ಮೂರು ಗವರ್ನಮೆಂಟ್ ಆರ್ಡರ್ ಮಾಡಿದ್ದಾರೆ ಎಂದು ಹೇಳಿದಿರಿ. ಫ್ರೇಮ್‌ವರ್ಕ್ ಅಗ್ರಿಮೆಂಟನ್ನು ಯಾವುದೇ ಕಾರಣದಿಂದಲೂ ವಾಯ್‌ಲೇಟ್ ಮಾಡಬಾರದು ಎಂದು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಹೇಳಿವೆಯೇನು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೌದು, that is what I am telling. That is what High Court says. That is what Supreme Court upheld in Somashekar Reddy case.

ಸುಪ್ರೀಂ ಕೋರ್ಟ್‌ನಲ್ಲಿ ಫೈನಲ್ ಜಡ್ಜ್‌ಮೆಂಟ್ ಕೊಡತಕ್ಕಂಥ ಸಂದರ್ಭದಲ್ಲಿ, ನಾವು ಹೈಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಇಂಟರ್‌ಫಿಯರ್ ಆಗತಕ್ಕಂಥ ಅವಶ್ಯಕತೆ ಇಲ್ಲ, the Only thing is dispute in the contract.

ಅಧ್ಯಕ್ಷರು: ಸಬ್ಸಿಕ್ವೆಂಟ್ ಆರ್ಡರ್ ಮಾಡಿ ಎಕ್ಸಸ್ ಲ್ಯಾಂಡ್ ಕೊಟ್ಟಿದ್ದಾರೆ ಎಂದು ಹೇಳಿದಿರಲ್ಲಾ, ನೈಸ್ ಕಂಪನಿಯವನು, ಅದರ ಬಗ್ಗೆ ಕೋರ್ಟ್‌ನಲ್ಲಿ ಹೇಳಿದ್ದಾನೇನು?

Sri G.V. Sri Rama Reddy: That has not been brought to the notice of the Court.

ಅಧ್ಯಕ್ಷರು: ಸುಪ್ರೀಂ ಕೋರ್ಟಿನ ಮುಂದೆ ಆತ ಅದನ್ನು ತರಲೇ ಇಲ್ಲವೇ? ನೈಸ್ ಕಂಪನಿಯವನು ಆ ವಿಚಾರವನ್ನು ಎತ್ತಿದ್ದಾನೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹೌದು. ಸೋಮಶೇಖರ ರೆಡ್ಡಿ ಕೇಸ್‌ನಲ್ಲಿ ಅವನು ಕೋರ್ಟ್‌ಗೆ ಅಫಿಡವಿಟ್ ಹಾಕಿದ್ದಾನೆ.

ಅಧ್ಯಕ್ಷರು: ನಾನು ಕೇಳುತ್ತಿರುವುದೇನೆಂದರೆ, has he brought that before the Supreme Court?

Sri G.V. Sri Rama Reddy: No, Not even before the High Court. ಸೋಮಶೇಖರ ರೆಡ್ಡಿ ಕೇಸ್‌ನಲ್ಲಿ ಆತನೇ ಹಾಕಿರತಕ್ಕಂಥ ಅಫಿಡವಿಟ್ ಇದೆ. ಫ್ರೇಮ್‌ವರ್ಕ್ ಅಗ್ರಿಮೆಂಟ್ ಪ್ರಕಾರ ನನಗೆ ಎಷ್ಟೆಷ್ಟು ಜಮೀನು ಬೇಕು ಎಂದು ಅವನೇ ಹಾಕಿರತಕ್ಕಂಥ ಅಫಿಡವಿಟ್ ಇದೆ. ನಾನು ಆ ಅಫಿಡವಿಟ್‌ನ ವಿವರಗಳಿಗೆ ಹೋಗುವುದಿಲ್ಲ. 20,193 ಎಕರೆ ಲ್ಯಾಂಡ್ ಬೇಕು ಎಂದು ನೈಸ್ ಕಂಪನಿಯವನು ಅಫಿಡವಿಟ್ ಹಾಕಿದ್ದಾನೆ. This is an affidavit filed before the High Court. ಹಾಗಾಗಿ, ಇವತ್ತು ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಹೊಡೆಯಲಿಕ್ಕೆ ಸರ್ಕಾರ ಅನುಮತಿ ಕೊಡುತ್ತಿದೆ. violation of the framework agreement.

ಎರಡನೆಯದು, ಇವತ್ತು ಒಂದು ಕಂಪನಿ ಸರ್ಕಾರಕ್ಕೆ ಸವಾಲು ಹಾಕುತ್ತಿದ್ದರೆ ಈ ಕೈಲಾಗದ ಸರ್ಕಾರ ಇವತ್ತು ಕಣ್ಣು ಮುಚ್ಚಿಕೊಂಡು ಕುಳಿತಿದೆ. ಇವರಲ್ಲೇ ಭಾಗವಾಗಿದೆ. They got divided on that issue. The whole Government machinery has collapsed now. This is the most crucial point. ಒಂದು ಕಡೆ ಸರ್ಕಾರ ಮುಳುಗುತ್ತಿದೆ, ಇನ್ನೊಂದು ಕಡೆ ಸಾವಿರಾರು ಎಕರೆ ಸರ್ಕಾರೀ ಭೂಮಿ, ಖಾಸಗಿ ಭೂಮಿ, ಬಡವರು, ರೈತರ ಹತ್ತಿರ ತೆಗೆದುಕೊಂಡಂಥ ಭೂಮಿಯನ್ನು ಒಂದು ಕಂಪನಿಗೆ ಕೊಟ್ಟುಬಿಟ್ಟು, ಅವನ ಇಷ್ಟದ ಪ್ರಕಾರ ಮಾರಾಟ ಮಾಡಲಿಕ್ಕೆ ಕೊಟ್ಟಿದ್ದಾರೆ. ಫ್ರೇಮ್‌ವರ್ಕ್ ಅಗ್ರಿಮೆಂಟ್ ಮತ್ತು ಎಂ.ಓ.ಯು.ನಲ್ಲಿ ಏನಿದೆ ಎಂದರೆ, ಒಂದೇ ಒಂದು ನಯಾಪೈಸೆಯನ್ನೂ ಗವರ್ನಮೆಂಟ್‌ನವರು ಇನ್‌ವೆಸ್ಟ್ ಮಾಡುವುದಿಲ್ಲ, ಅವನು ಪೂರ್ತಿ ಹಣವನ್ನು ಇನ್‌ವೆಸ್ಟ್ ಮಾಡಿ ರೋಡ್ ಕನ್‌ಸ್ಟ್ರಕ್ಟ್ ಮಾಡಿ 30 ವರ್ಷ ಟೋಲ್ ಕಲೆಕ್ಷನ್ ಮಾಡಿಕೊಳ್ಳಬೇಕು ಎಂದು ಹೇಳಿದೆ. ಅದಕ್ಕೆ ಸರ್ಕಾರೀ ಭೂಮಿ ಬೇಕಾದರೂ

ಕೂಡ, ಅದನ್ನು ಮಾರ್ಕೆಟ್ ರೇಟ್‌ನಲ್ಲಿ ಪರ್ಚೇಸ್ ಮಾಡಬೇಕು ಎಂದು ಫ್ರೇಮ್‌ವರ್ಕ್ ಅಗ್ರಿಮೆಂಟ್‌ನಲ್ಲಿದೆ ಎಂ ಓ ಯು ನಲ್ಲಿದೆ. ಆದರೆ ಆ ಫ್ರೇಮ್‌ವರ್ಕ್ ಅಗ್ರಿಮೆಂಟ್ ಮತ್ತು ಎಂ ಓ ಯು ವನ್ನು ವಾಯ್‌ಲೇಟ್ ಮಾಡಿ ಇವತ್ತು ಆ ನೈಸ್ ಕಂಪನಿಯವರು ಜಮೀನನ್ನು ಕಬಳಿಸಿ, ಮಾರಾಟ ಮಾಡಲಿಕ್ಕೆ ಹೋಗಿದ್ದಾರೆ. ಮಾರ್ಕೆಟ್ ರೇಟ್‌ನಲ್ಲಿ ಕೊಂಡುಕೊಳ್ಳಬೇಕು ಎಂದು ಫ್ರೇಮ್‌ವರ್ಕ್ ಅಗ್ರಿಮೆಂಟ್‌ನಲ್ಲಿ ಹೇಳಿದ್ದರೆ, ಈ ಸರ್ಕಾರ by Government order they give the land on the basis of lease for Rs. 10/- per acre for 40 years! Is it not a public loot? Is it not the misuse of the land? ಗವರ್ನಮೆಂಟ್ ಪ್ರಾಪರ್ಟಿಯನ್ನು 10 ರೂಪಾಯಿಗೆ ನೀವು ಲೀಸ್‌ಗೆ ಕೊಡುತ್ತೀರಿ. ಆದರೆ ಫ್ರೇಮ್‌ವರ್ಕ್ ಅಗ್ರಿಮೆಂಟ್‌ನಲ್ಲಿ ಮತ್ತು ಎಂ.ಓ.ಯು.ನಲ್ಲಿ ನೀವು ಸರ್ಕಾರೀ ಭೂಮಿಯನ್ನು ಮಾರ್ಕೆಟ್ ರೇಟ್‌ನ್ಲಲಿ ಕೊಂಡುಕೊಳ್ಳಬೇಕು ಎಂದು ಇದೆ. But violating both MoU and framework agreement, Government made an order giving a concession at Rs.10/- for lease. ಇದೇ ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದಲ್ಲಿ ಕುಳಿತು ಮಾತನಾಡುವಾಗ, ಜಗತ್ತಿನಲ್ಲೇ ಇಂಥ ದೊಡ್ಡ ಸ್ಕ್ಯಾಂಡಲ್ ಎಲ್ಲೂ ನಡೆದಿಲ್ಲ ಎಂದು ಹೇಳಿದ್ದಾರೆ.

Sri K.R. Ramesh Kumar: You have been giving us very good information. We are also concerned. Number of Governments have come and gone. ಯಾವ ಗವರ್ನಮೆಂಟ್ ಆರ್ಡರ್, ಯಾವ ಡೇಟಿಗೆ ಆಯಿತು ಎನ್ನುವುದನ್ನು ಹೇಳಿದರೆ ನಮಗೆ ಸುಲಭವಾಗುತ್ತದೆ. ಯಾರ್‍ಯಾರು ಮಹಾನುಭಾವರು ಇದ್ದರು ಎಂಬುದು ಗೊತ್ತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ನೀವು 1988ಕ್ಕೆ ಹೋಗಬೇಕು.

ಶ್ರೀ ಬಸವರಾಜ ರಾಯರೆಡ್ಡಿ: ಅವರು 1995ರಿಂದ ಪ್ರಾರಂಭ ಮಾಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವು ಅಲೋ ಮಾಡಿದರೆ ನಾನು ಹೇಳುತ್ತೇನೆ.

ಅಧ್ಯಕ್ಷರು: ದಯಮಾಡಿ ನೀವು ಮುಗಿಸಿಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಯಾವ ಯಾವ ಡೇಟ್‌ನಲ್ಲಿ ಆಗಿದೆ ಎಂದು ಮಾನ್ಯ ರಮೇಶ್ ಕುಮಾರ್‌ರವರು ಕೇಳಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅಲೋ ಮಾಡಿದರೆ ಡೀಟೇಲ್ಡ್ ಡಿಸ್ಕಷನ್‌ಗೆ ಹೋಗಬಹುದು.

ಅಧ್ಯಕ್ಷರು : ನೀವು ಬೇಗ ಮುಗಿಸಿಬಿಡಿ. ಅದನ್ನು ನಾನು ಹೇಳುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ನಾವೂ ಕೂಡ ಚರ್ಚೆಯಲ್ಲಿ...

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಬೇಗ ಮುಗಿಸಿ ಎಂದು ಹೇಳಬೇಡಿ. ಏಕೆಂದರೆ, ಅದಕ್ಕೆ ಅವರೊಬ್ಬರೇ ಸಿಗ್ನೇಟರಿ. ಬಹಳ ವ್ಯಾಲ್ಯುಯಬಲ್ ಇನ್‌ಫರ್ಮೇಷನ್ ಕೊಡುತ್ತಿದ್ದಾರೆ. ಅನೇಕ ಜನರು, ನಾವು ಹೆಚ್ಚು ಡೀಟೇಲ್ಸ್‌ಗೆ ಹೋಗಿಲ್ಲ. That is useful to the House. ಅವರು ಮಾತನಾಡಲಿ ನೀವು ಅಡ್ಜರ್ನ್‌ಮೆಂಟ್ ಮೋಷನ್‌ಗೇ ಅಂತ ಕೊಡಬೇಡಿ. ಅವರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ತಾವು ಇದನ್ನು ಯಾವ ನಿಯಮದ ಕೆಳಗೆ ತೆಗೆದುಕೊಂಡಿದ್ದೀರೆಂಬುದನ್ನು ಸ್ಪಷ್ಟ ಮಾಡಬೇಕು.

ಅಧ್ಯಕ್ಷರು: ಅವರು ಮೊದಲು ಪ್ರಿಲಿಮಿನರಿ ಸಬ್‌ಮಿಷನ್ ಮಾಡುತ್ತಿದ್ದಾರೆ. ಮಾಡಲಿ. ನೀವು ಸುಮ್ಮನೆ ಈಗಲೇ ನಿಂತುಕೊಂಡರೆ ಹೇಗೆ?

ಶ್ರೀ ಹೆಚ್.ಡಿ. ಬಸವರಾಜು: ಡೀಟೇಲಾಗಿ ಬಂದೇ ಬರುತ್ತದೆ. ಇದು ಸಂಪೂರ್ಣವಾಗಿ ಎಳೆ ಎಳೆಯಾಗಿ ಬಿಡಿಸಿ ಮಾತನಾಡುವಂಥ....

(ಗೊಂದಲ)

ಅಧ್ಯಕ್ಷರು : ಆಯಿತು, ನೀವು ಸುಮ್ಮನಿರಿ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ಹಾಗಾಗಿ, ಯಾವ್ಯಾವ ಸರ್ಕಾರ, ಯಾವ್ಯಾವ ಸಂದರ್ಭಗಳಲ್ಲಿ ಆದೇಶಗಳನ್ನು ಕೊಟ್ಟಿತು ಎನ್ನುವುದನ್ನು ನಾವು ಚರ್ಚೆಯಲ್ಲಿ ಮಂಡನೆಯನ್ನು ಮಾಡಿಯೇ ಮಾಡುತ್ತೇವೆ. ಇದರಲ್ಲಿ ಮುಚ್ಚುಮರೆ ಏನಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ: ಮಾನ್ಯ ಅಧ್ಯಕ್ಷರೆ, ಈಗ ನಾವೂ ಕೂಡ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಆಸಕ್ತರಾಗಿದ್ದೇವೆ. ಆದ್ದರಿಂದ, ಅದನ್ನು ಬೇರೆ ರೂಪದಲ್ಲಿ ತೆಗೆದುಕೊಂಡರೆ ನಮಗೂ ಅವಕಾಶ ಮಾಡಿಕೊಟ್ಟ ಹಾಗಾಗುತ್ತದೆ.

Mr. Speaker : I will decide it. ನಾನು ಹಿಯರ್ ಮಾಡುತ್ತಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎ.ಟಿ. ರಾಮಸ್ವಾಮಿ : ಬೇರೆ ರೂಪದಲ್ಲಿ ತೆಗೆದುಕೊಳ್ಳಿ. ನಾವು ಚರ್ಚೆಯಲ್ಲಿ ಭಾಗವಹಿಸಬಹುದು.

ಅಧ್ಯಕ್ಷರು : ಇರಲಿ. ಅವರು ಸಬ್‌ಮಿಷನ್ ಮಾಡಲಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಿಮ್ಮ ದೌರ್ಭಾಗ್ಯಕ್ಕೆ ಚರ್ಚೆಯೊಂದೇ ನಿಮಗೆ ಉಳಿದಿರುವುದು. ಇನ್ನೇನೂ ಉಳಿದಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ಇಲ್ಲ, ನಿಮ್ಮ ಏನು ಆಸಕ್ತಿ ಇದೆ, ನಿಮ್ಮ ಹಿತ ಕಾಪಾಡಲಿಕ್ಕೇ ನಾನು ನಿಂತಿರುವುದು.

ಅಧ್ಯಕ್ಷರು : ಇದೇನು? ಮಾನ್ಯ ರಮೇಶ್ ಕುಮಾರ್‌ರವರೆ, ಏನು ಈ ತರಹ ಕನ್‌ಫ್ಯೂಸ್ ಮಾಡುತ್ತಿದ್ದೀರಲ್ಲಾ.

ಶ್ರೀ ಎ.ಟಿ. ರಾಮಸ್ವಾಮಿ : ರಾಜ್ಯದ ಜನರ ಹಿತದೃಷ್ಟಿಯಿಂದ ನಾನು ಚರ್ಚೆಯನ್ನು ಮಾಡಲೇಬೇಕಾಗುತ್ತದೆ.

ಅಧ್ಯಕ್ಷರು : ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ್ದೇನೆಂದರೆ, ಚರ್ಚೆ ಒಂದೇ ಮಾಡುವುದಕ್ಕೆ ಸಾಧ್ಯ. ನಿಮ್ಮ ಕೈಯಲ್ಲಿ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಎಂದು ಹೇಳುತ್ತಿದ್ದಾರಲ್ಲಾ, ಇದೇನು ಸ್ವಾಮಿ? ಜಡ್ಜ್‌ಮೆಂಟ್ ಕೊಟ್ಟುಬಿಡುತ್ತಿದ್ದೀರಿ ಎಂದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಂತ್ರಿಮಂಡಲ ವಿಸ್ತರಣೆ ಆಗಿ ಹೋಯಿತು. ನಿಮಗೆ ಇನ್ನೇನು ಆಸಕ್ತಿ ಇದ್ದರೂ ಚರ್ಚೆ ಮಾತ್ರ ಸೀಮಿತ. ಇನ್ನೇನೂ ನಿಮಗೆ ಅವಕಾಶಗಳಿಲ್ಲ. ದೌರ್ಭಾಗ್ಯ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರಾಮಸ್ವಾಮಿಯವರು ಮಂತ್ರಿಗಾಗಿ ಯಾವತ್ತೂ ಕಾದಿರಲಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ನಾನು ಅಪೇಕ್ಷಿತನೇ ಅಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಪ್ರಕಾರ, ದಿನಾಂಕ 19.08.99, ಅವರಿಗೂ ಗೊತ್ತಿದೆ. ಏನು ಆರ್ಡರ್ ಎಂದರೆ;

"The framework agreement replaced at the end of the concession period i.e., 10 years concession period and 30 years concession period, the Company shall transfer to the Government of Karnataka the toll road i.e., express highway, peripheral road and the link road together with the toll collection equipment and the toll booth located on the toll road. The Company, as per the framework agreement has also to transfer the common utilities and amenities, townships provided for to the Government of Karnataka."

Again,

"The Company represented to the Government to grant on lease about 5,000 acres of government land that will be utilised for the purpose of construction of the express highway, peripheral road and the link road together with the interchanges and the area that will be utilised for the purpose of providing toll collection equipment etc., as well as the land that shall be used to provide common utilities. Hence the following order has been made on 19.8.1998."

What is that following order?

"It is on the above assumption that the Government decided to provide government land at lease, rental of Rs. 10/- per annum for a period of 40 years. This is a major deviation from the basis noted above in the high level committee report that the government land shall be purchased by the consortium on the price fixed by the government as per the rules. This amounted to indirect funding of project by the government by making a grant in favour of NICE of the government land on lease, rental which is a good as well as free and as such, more than 1/3 of the land required under project had been given as good, as free to NICE for a period of 40 years providing a bonanza of Rs. 500 crore to project Company. As otherwise under the original understanding, the Government land had to purchased at the above Rs. 5 lakh per acre.

ಶ್ರೀ ಸಿ.ಎಸ್. ನಾಡಗೌಡ(ಅಪ್ಪಾಜಿ) : ಕೆಳಗಡೆ ತಾವೇನು ಓದಿದಿರಿ ಅದು ಯಾರ ರಿಮಾರ್ಕ್ಸ್?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದು ರಿಮಾರ್ಕ್ಸ್ ಅಲ್ಲ. ಆರ್ಡರ್ ಅದು. ಫೈನಲ್ ಡಿಸೀಷನ್.....

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) : ಒಂದು ಎಕರೆಗೆ 10 ರೂಪಾಯಿಗೆ ಲೀಸ್ ಕೊಡಬೇಕೆಂದು ಆಯಿತು. ಗೌರ್ನ್‌ಮೆಂಟ್ ಯಾವುದೇ ಇರಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲ ಮಾನ್ಯ ನಾಡಗೌಡರೇ, ಅವರು ಓದಿಕೊಂಡು, ಡೀಟೇಲ್ ನೋಟ್ ಮಾಡಿಕೊಂಡು ಬಂದಿದ್ದಾರೆ. ಅವರ ನೋಟ್ಸ್‌ಗೆ ನೀವು ಕರೆಕ್ಷನ್ ಮಾಡಿದರೆ ಆಶ್ಚರ್ಯವಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೋಡಿ...... and land shall be used to provide common facilities and amenities in the township at the concessional rate. Hence the following order." ಅದರ ಆಧಾರದ ಮೇಲೆ ಅವರು ಆರ್ಡರ್ ಮಾಡಿರತಕ್ಕಂಥದ್ದು. ಮತ್ತೆ ಅವರಿಗೆ 10 ರೂಪಾಯಿಗಳಿಗೆ ಕೊಡಬೇಕೆಂದು ಆಗಿರತಕ್ಕಂಥದ್ದು. ಮತ್ತೆ ದಿನಾಂಕ 29.1.01

"While the G.O. dtd. 7th October, 1999, by specifically recording that out of the total government land given on a concessional rate to an extent of 5,684 acres 10 guntas for the purpose of implementation of Bangalore-Mysore Infrastructure Corridor Project, to use an area measuring about 3,219 acres for the purpose of proposed 5 satellite towns and commercial purpose as detailed in the appendix and it has been ordered to fix the sale price to the extent of government land to NICEL Company on the basis of district index price for the year 1999-2000 in the appendix survey numbers relating to, only 5 townships were given. This was done by over-ruling the objection of the Finance Department to fix the market value prevailing rate in the time of taking possession of the government land by the Company on a total empty and surreptitions reason that there is some shortfall in availability of the government land and due to that this concession should be provided without bothering to assess the financial implication of such a measure and against the advice of the Finance Department which was alone competent to decide the same."

Again 18.6.2001.

" ... Vide administrative order to G.O. dtd. 29.1.2001, it was further stipulated that NICE should purchase the government land within 10 years from the date of financial closure of the project. This is the additional bonanza given to the project Company. As by fixing the reference value, government land to be sold at the distrinct index price within a period of 10 years from the date of the financial

closure of the project, Government of Karnataka gave the right to the Company to invest close to nothing and straight away booked a heavy profit by selling government land at the index price of 1999-2000, without even realising the extent of financial benefit, indirect funding, it was providing to the Company which to-day came upto booking profit the government land in multiples of 30 to 100 times or even more in certain cases. In this case, NICE which in the earlier G.O. itself, claimed right to sell above….."

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಶ್ರೀರಾಮರೆಡ್ಡಿಯವರೆ, You have quoted the G.O. You have to explain the contents of the government order.

ಆಮೇಲೆ, you have to narrate to the House.

ನೀವೇನು ಮಾಡಿದಿರಿ, ಜಿಓ ಮತ್ತು ಅದಕ್ಕೆ ಸಮರಿ ನೋಟ್ಸ್, ಕಂಟೆಂಟ್ಸ್ ಎಲ್ಲಾ, you are reading out the whole thing.

ಜಿ.ಓ.ಅಷ್ಟೆ. ನಿಮಗೆ ಆ ನೋಟ್ಸ್ ಯಾರು ಪ್ರಿಪೇರ್ ಮಾಡಿದರು? ಏನು ಪ್ರಿಪೇರ್ ಮಾಡಿದರು, ಅವೆಲ್ಲಾ ನಮಗೆ ಸಂಬಂಧವಿಲ್ಲ. ನಮಗೇನೆಂದರೆ, ಒಂದೊಂದು ಗೌರ್ನಮೆಂಟ್ ಆರ್ಡರ್‌ಗೂ ಏನು ವೇರಿಯೇಷನ್ ಇದೆ We want to know. ಒಂದು ನಿಮಿಷ ರೆಡ್ಡಿಯವರೆ, kindly bear with me. ಈಚ್ ಗೌರ್ನಮೆಂಟ್ ಆರ್ಡರ್ ಕಂಟೆಂಟ್ಸ್ ಏನು? ಯಾವ ಡೇಟ್‌ಗೆ ಗೌರ್ನಮೆಂಟ್ ಆರ್ಡರ್ ಆಯಿತು ಅಷ್ಟು ಹೇಳಬೇಕು. ನೀವೇನು ಮಾಡಿಕೊಂಡಿದ್ದೀರಿ, for the purpose of your convenience, ನೀವು ಪ್ರಿಪೇರ್ ಆಗುವುದಕ್ಕೆ ನೋಟ್ಸ್ ಪ್ರಿಪೇರ್ ಮಾಡಿಕೊಂಡಿದ್ದೀರಿ. ಆ ನೋಟ್ಸ್ ಎಲ್ಲಿ ಪ್ರಿಪೇರ್ ಆಯಿತು? ಯಾರು ಮಾಡಿದರು? ಅದೆಲ್ಲಾ we are not concerned. You are reading out the whole notes.

ನಿಮ್ಮ ನೋಟ್ಸ್ ನಮಗೆ ಅಗತ್ಯವಿಲ್ಲ. ಜಿ.ಓ. ಮತ್ತು ಅದರ ಕಂಟೆಂಟ್ಸ್ ಮಾತ್ರ divulge ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದನ್ನೇ ಹೇಳುತ್ತಿರತಕ್ಕಂಥದ್ದು.

Sri K.R. Ramesh Kumar: I am appealing to you to give us……

Sri G.V. Sri Rama Reddy: I am humbly telling that I am quoting only G.O. and the explanation then.

ಶ್ರೀ ಎನ್. ಚೆಲುವರಾಯಸ್ವಾಮಿ: ವಾಟಾಳ್ ನಾಗರಾಜ್ ಮತ್ತು ಶ್ರೀರಾಮ ರೆಡ್ಡಿಯವರಿಗೂ ನೀವು ಹಾಗೆ ಹೌಸ್‌ನಲ್ಲಿ ಅಂದುಬಿಟ್ಟರೆ, ನೀವೆಲ್ಲಾ ಸ್ನೇಹಿತರಾಗಿದ್ದವರು ಪಾಪ ಅವರು ಕಷ್ಟಪಟ್ಟು ಸತ್ಯ ಹೇಳುವುದಕ್ಕೆ ಹೋದರೆ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನನಗೆ ಅವರು ಹೇಳಿಯೇ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಯಾರ್‍ಯಾರು ಹೇಳಿದ್ದನ್ನು ಇಲ್ಲಿ ಹೇಳುತ್ತಿದ್ದೀರಿ, ಅದೆಲ್ಲಾ ನಾನೂ ಹೇಳಬೇಕಾಗಿಲ್ಲ.

ಅಧ್ಯಕ್ಷರು: ಬೇಗ ಮುಗಿಸಿ.

ಶ್ರೀ ಡಿ.ಆರ್. ಪಾಟೀಲ್: ನೀವು ಡೇಟ್ ಹೇಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಂಜೇಗೌಡರು ಇರಬೇಕು. ಅವರಿಲ್ಲ.

ಅಧ್ಯಕ್ಷರು: ಮಾನ್ಯ ರೆಡ್ಡಿಯವರೆ, ಬೇಗ ಮುಗಿಸಿ. ನೀವು ನೀವೇ ಈ ರೀತಿ ಮಾತನಾಡಿಕೊಂಡರೆ ಹೇಗೆ? ಬೇಗ ಮುಗಿಸಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವೇ ಉದ್ದೇಶಪೂರ್ವಕವಾಗಿ ಹೊರಗಡೆ ಕಳುಹಿಸಿ ಬಿಟ್ಟಿದ್ದೀರಿ. ಮಾನ್ಯ ಡಿ.ಆರ್. ಪಾಟೀಲ್‌ರವರು ಜಿ.ಓ.ಡೇಟ್‌ಗಳನ್ನು ಕೇಳಿದರು. ದಿನಾಂಕ 19.8.1999, 29.1.2000 and 18.6.2001, 12.11.2003.

> "The then Minister for Large and Medium Scale Industries in the meeting to review the progress relating to the BMIC under the Chairmanship directed the Special Deputy Commissioner (BMICP) to identify the lands that are notified, but not required for the project and observed that the private area notified as on date was 20,824 acres i.e., 6,319 acres is notified in excess 5,000 acres of land acquires and whether of the private land requirement. Later on, the Minister noted that he had instructed to indentify the excess there is any such necessity, this cannot be a real estate project."
>
> This is on 12.11.2003.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ದೇಶಪಾಂಡೆಯವರ ಅಬ್ಸರ್ವೇಷನ್?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದು ನನಗೆ ಗೊತ್ತಿಲ್ಲ. ಆ ಡೇಟ್‌ನಲ್ಲಿ ಆಗಿರತಕ್ಕಂಥದ್ದು, ಮತ್ತೆ ಅದು ಪುನಃ ರದ್ಧಾಂತ ಆಗುವುದು ಬೇಡ, ಏಕೆಂದರೆ ಅವರು ಪುನಃ ನನ್ನ ಹೆಸರು ಏಕೆ ಹೇಳಿದಿರಿ ಎನ್ನುವುದು ಬೇಡ. ನಾವು ಯಾವಾಗಲೂ ಒಳ್ಳೆಯದನ್ನೇ ಹೇಳುವುದು, ಕೆಟ್ಟದ್ದು ಯಾವತ್ತೂ ಹೇಳುವುದಿಲ್ಲ. ಮತ್ತೆ ದಿನಾಂಕ 28.5.2003ನಲ್ಲಿ

> "The empowered Committee over-ruled the objection of the Revenue Department not to give the government land in Bangalore Urban and Rural Districts more than what is prescribed in the framework agreement and sanctioning transfer of 190 acres 30 guntas of government land to BMICP through KIADB in a letter dtd. 21.5.2003 is not in consonance with the framework agreement."

1998–2000 ಇದರ ಮಧ್ಯೆ ಆಗಿರುವಂಥದ್ದು, ಒಟ್ಟು ಲ್ಯಾಂಡ್ ಅವರಿಗೆ ಎಷ್ಟು ಬೇಕಾಗಿತ್ತು ಅದಕ್ಕಿಂತ ಹೆಚ್ಚಿಗೆ ಅಕ್ವೈರ್ ಮಾಡಬೇಕು, ನೋಟಿಫೈ ಮಾಡಿರುವುದು 29,000 ಎಕರೆಗೆ. ಕೆಐಡಿಬಿಎ ನವರು ಒಂದು ಆ್ಯಕ್ಟ್ ಅಮೆಂಡ್ ಮಾಡಿ ಅಕ್ವೈರ್ ಮಾಡಿದಂಥ ಲ್ಯಾಂಡ್‌ನ್ನು re-convey ಮಾಡಬಾರದೆಂದು ಕೆಐಡಿಬಿಡಿನವರು ಆ್ಯಕ್ಟ್ ಅಮೆಂಡ್ ಮಾಡಿದ್ದಾರೆ. ಇದನ್ನು ಮಾಡಿರುವುದು 2001–2002ನೇ ಇಸ್ವಿಯಲ್ಲಿ. ಹಾಗಾಗಿ ಈ ಡೇಟ್‌ಗಳಲ್ಲಿ ಗೌರ್ನಮೆಂಟ್ ಆರ್ಡ್‌ರ್‌ಗಳನ್ನು ಮಾಡಿರುವುದು. ಫ್ರೇಮ್ ವರ್ಕ್ ಅಗ್ರಿಮೆಂಟ್‌ನ್ನು ಸಂಪೂರ್ಣವಾಗಿ ವೆಯಲೇಟ್ ಮಾಡಿದ್ದಾರೆ. ಫ್ರೇಮ್‌ವರ್ಕ್ ಅಗ್ರಿಮೆಂಟ್‌ನ್ನು ವಯಲೇಟ್ ಮಾಡಿರುವ ಪರಿಣಾಮದಿಂದಾಗಿ ಇವತ್ತು ಸಾವಿರಾರು ಎಕರೆ ಭೂಮಿ ನೈಸ್ ಕಂಪನಿಯ ಪಾಲಾಗುವುದರ ಜೊತೆಗೆ, ಸಾವಿರಾರು ಕೋಟಿ ರೂಪಾಯಿಗಳನ್ನು ಆತ ತನ್ನ ಕಂಪನಿಗೆ ಲಾಭ ಮಾಡಿಕೊಳ್ಳುತ್ತಿದ್ದೇನೆ. ಇವತ್ತು ಇಷ್ಟೆಲ್ಲಾ ಲಾಭ ಮಾಡಿಕೊಳ್ಳಲಿಕ್ಕೆ ಬಂದಿರತಕ್ಕಂಥ ಒಂದು ಕಂಪನಿ, ಇಡೀ ರಾಜ್ಯ ಸರ್ಕಾರವನ್ನು ಎದುರಿಸುತ್ತಿದೆ, ಐದು ಕೋಟಿ ಜನರಿಂದ ಆಯ್ಕೆಯಾಗಿರತಕ್ಕಂಥ ಜನಪ್ರತಿನಿಧಿಗಳೆಲ್ಲರೂ ನಿಷ್ಪಯೋಜಕರು ಎಂದು ಆತ ಸರ್ಕಾರಕ್ಕೆ 12ನೇ ಜೂನ್‌ಗೆ ಲೆಟರ್ ಬರೆದು ಗೇಲಿ ಮಾಡುತ್ತಿದ್ದಾನೆ. ಈ ಸರ್ಕಾರದ ಕೈಯಲ್ಲಿ

ಏನೂ ಆಗುವುದಿಲ್ಲ, ಏನೂ ಪ್ರಯೋಜನವಿಲ್ಲ ಎನ್ನತಕ್ಕಂಥ ಆತ ಸರ್ಕಾರಕ್ಕೆ ಪತ್ರ ಬರೆದರೆ ಈ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಹೀಗಾಗಿ ನಾನು ಇಷ್ಟೇ ತಮಗೆ ಹೇಳುವುದು, ಇದರ ಬಗ್ಗೆ ಡಿಟೇಲ್ಸ್ ಡಿಸ್‌ಕಷನ್‌ಗೆ ಅವಕಾಶ ಮಾಡಿಕೊಡಬೇಕು, ಇದು ಭಾರಿ ಗಂಭೀರವಾದಂಥ ಆಪಾದನೆ ಇದೆ, ಗಂಭೀರವಾದಂಥ ಸಮಸ್ಯೆ ಇದೆ, ಒಂದು ಕಡೆ ನಾನು ಈಗಾಗಲೇ ಪ್ರಾರಂಭದಲ್ಲಿ ಹೇಳಿದ ಹಾಗೆ ಇದು ರಾಜಕೀಯ ಬಿಕ್ಕಟ್ಟಿನಲ್ಲಿದೆ. ಇನ್ನೊಂದು ಕಡೆ ಇಡೀ ಕರ್ನಾಟಕದ ರಾಜ್ಯದ ಅತಿ ಬೆಲೆ ಬಾಳತಕ್ಕಂಥ ಭೂಮಿಯನ್ನು ಲೂಟಿ ಮಾಡತಕ್ಕಂಥ ಕೆಲಸ ಇನ್ನೊಂದು ಕಡೆ ನಡೆಯುತ್ತಿದೆ. ಇದು ಯಾವುದೇ ಕಾರಣದಿಂದ, ಸರ್ಕಾರದ ಮುಂದೆ ಇವತ್ತು ಎರಡೇ ಎರಡು ಅಪ್ಷನ್ಸ್ ಇರುವುದು. Either the Government should take necessary steps to mend that Company or the Government has to quit. ಇವರ ಕೈಯಲ್ಲಿ ಆಗಲಿಲ್ಲವೆಂದರೆ, ಆ ಕಂಪನಿಯವರು ಸರ್ಕಾರವನ್ನೇ ಹೆದುರಿಸುತ್ತಿದ್ದಾರೆಂದರೆ, ಆ ಕಂಪನಿಯನ್ನಾದರೂ ಹದ್ದುಬಸ್ತಿನಲ್ಲಿಡತಕ್ಕಂಥ ಶಕ್ತಿಯನ್ನು ಇವರು ತೋರಿಸಬೇಕು ಇಲ್ಲಾಂದ್ರೆ ರಾಜೀನಾಮೆಯನ್ನಾದರೂ ಕೊಡಬೇಕು. ಮತ್ತೆ ಸೋಮಶೇಖರ್ ರೆಡ್ಡಿ ಕೇಸ್‌ನಲ್ಲಿ ಕ್ಲಿಯರ್ ಆಗಿ ಕೋರ್ಟ್ ಹೇಳಿದೆ, ಫ್ರೇಮ್‌ವರ್ಕ್ ಅಗ್ರಿಮೆಂಟ್‌ನ್ನು ನೀವು ಇವತ್ತು ಕ್ವೆಶ್ಚನ್ ಮಾಡುವುದಕ್ಕೆ ಬರುವುದಿಲ್ಲ, ಅಂತ If the Legislature minds that agreement can be revived, ಎಂದು ಹೇಳತಕ್ಕಂಥದ್ದನ್ನು ಸೋಮಶೇಖರ್ ರೆಡ್ಡಿ ಕೇಸ್‌ನಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ದಿನಾಂಕ 21.9.98ನಲ್ಲಿ ಹೈಕೋರ್ಟಿನಲ್ಲಿ ಏನು ಹೇಳುತ್ತಾರೆಂದರೆ,

> "The Hon'ble High Court of Karnataka dismissed the PIL filed by Somashekhara Reddy by judgment dtd. 21.9.90 choosing not to interfere in the policy decision of the government to sign the framework agreement, at the same time holding that the Legislature of the State has not been bound by the agreement and the Legislature has the power to nullify the agreement entered into by the executive. Clearly, the High Court says that the Legislature can nullify the

whole agreement if the Government feels that the Company is violating both MOU and framework agreement."

That is why I request the Hon'ble Chair either to ask the Government to mend that Company or let them regisn from the post.

ಅಧ್ಯಕ್ಷರು: ನೀವು ಹೇಳುವ ಪ್ರಕಾರ, ಈ ಲೆಜಿಸ್ಲೇಚರ್ ಅಪಲೇಟ್ ಕೋರ್ಟ್ ಆಗಿ ಕುಳಿತುಕೊಳ್ಳಬೇಕು....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹೈಕೋರ್ಟಿನವರು ಕೊಟ್ಟಿರತಕ್ಕಂಥ ತೀರ್ಪು ಅದು. I am not telling that this Legislature should sit as an arbitrator or a judge. What the High Court has observed is that it need not interfere in the policy matter or the government. But, if the government feels, the Legislature can nullity that agreement. If the government feels that this company is violating any rules and regulations, framework..... that is what the Court observed. I am not telling that Whether you sit as an arbitrartor or a judge or an executive office, whatever it is, it is left to the government. But, my only point is that the government should mend that Company by taking over. Whether they will take it over or not, that is left to the government. But, the government must mend that Company or they should quit. This is all my preliminary submission.

ಅಧ್ಯಕ್ಷರು : ಈಗ ಸರ್ಕಾರದವರು ಏನು ಹೇಳುತ್ತಾರೆ?

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಎಲ್ಲಾ ಮಾನ್ಯ ಸದಸ್ಯರುಗಳು ಇದು ಬಹಳ ಗುರುತರವಾದ ಸಮಸ್ಯೆಗೆ ಒಳಗಾಗಿರತಕ್ಕಂಥದ್ದು, ಹೈಕೋರ್ಟ್ ಮತ್ತು ಸುಪ್ರೀಂಕೋರ್ಟಿನ ಆದೇಶ, ಸೋಮಶೇಖರ್ ರೆಡ್ಡಿಯವರ ಡಿವಿಜನ್ ಬೆಂಚಿನ ಜಡ್ಜ್‌ಮೆಂಟ್ ಮತ್ತು ಫ್ರೇಮವರ್ಕ್ ಅಗ್ರಿಮೆಂಟ್‌ನ ಚೌಕಟ್ಟಿನೊಳಗೆ ನಿರ್ಧಾರ ಮಾಡಬೇಕು ಎನ್ನುವಂಥ ಮಾತು ಏನಿದೆ, ಅದರ ಜೊತೆಗೆ ಮಾನ್ಯ ಶ್ರೀ ರಾಮರೆಡ್ಡಿಯವರು ಗುರುತರವಾದ ಮಾತನ್ನು ಹೇಳಿದ್ದಾರೆ. ಹೈಕೋರ್ಟ್ ಅಥವಾ ಸುಪ್ರೀಂ

ಕೋರ್ಟಿನವರು ಕೊಟ್ಟಿರತಕ್ಕಂಥ ತೀರ್ಪಿನ ವಿರುದ್ಧವಾಗಿ ಮೇಲ್ಮನವಿಯ ಪ್ರಾಧಿಕಾರವಾಗಿ ನಾವು ಕುಳಿತುಕೊಳ್ಳುವುದಿಲ್ಲ, ಶಾಸನ ಸಭೆಗೆ ಅಂತರ್ಗತವಾದಂಥ ಎಲ್ಲಾ ಅಧಿಕಾರ ಇರುತ್ತದೆ. ಅನೇಕ ಜಡ್ಜ್‌ಮೆಂಟ್‌ಗಳೂ ಕೂಡ ಇವೆ. ಅದು ತನ್ನ contractual obligation ಒಪ್ಪಂದದಿಂದ ಹಿಂದೆ ಹೋಗಬಹುದು. ಅಥವಾ ಒಪ್ಪಂದದ ನಡುವೆ ಇರತಕ್ಕಂಥ ವಿಚಾರಗಳ ಬಗ್ಗೆ ಬದಲಿಸಬಹುದು. ಇಲ್ಲದೇ ಹೋದರೆ ಇಡೀ ಆ ಒಪ್ಪಂದವನ್ನೇ ಅದು ತಿರಸ್ಕರಿಸಬಹುದು. ಅದಕ್ಕೆ ಒಂದು ಸಾರ್ವಭೌಮತ್ವದ ಹಕ್ಕು ಶಾಸಕ ಸಭೆಗೆ ಇದೆ ಎನ್ನತಕ್ಕಂಥದ್ದನ್ನು ಸುಪ್ರೀಂ ಕೋರ್ಟಿನವರು ಹೇಳಿದ್ದಾರೆ, ಈಗಲೂ ಅವರೂ ಕೂಡ ಉಲ್ಲೇಖನ ಮಾಡಿದ್ದಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ ಅನೇಕರಿಗೆ ತಪ್ಪು ಅಭಿಪ್ರಾಯಗಳು ಇವೆ. ಮಾನ್ಯ ಹಿರಿಯರಾದಂಥ ರಮೇಶ್ ಕುಮಾರ್‌ರವರೂ ಕೂಡ ಹೇಳಿದರು. ಯಾವ್ಯಾವ ಸರ್ಕಾರದ ಕಾಲದಲ್ಲಿ ಏನೇನು ಆಜ್ಞೆಗಳು ಆಗಿವೆ, ಅದರ ಮಾಹಿತಿ ಪೂರ್ಣವಾಗಿ ನಮಗೆ ಇಲ್ಲ, ಆ ಕಾರಣಕ್ಕಾಗಿ ಪೂರ್ಣ ಮಾಹಿತಿಯನ್ನು ಕೊಡಬೇಕಾದಂಥದ್ದು ಅಗತ್ಯವಿದೆ ಎನ್ನುವಂಥ ಕಾರಣ ಇರುವುದರಿಂದ ಮಾನ್ಯ ರಾಮಸ್ವಾಮಿಯವರು ಹಾಗೂ ಅನೇಕ ಸದಸ್ಯರು, ಈ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಕೋರಿದ್ದಾರೆ. ಅವರೊಬ್ಬರೆ ಸಿಗ್ನೇಟರಿ ಆಗಿ ಕೊಟ್ಟಿರತಕ್ಕಂಥದ್ದು ಇರುವಾಗ, ಇಂಥ ಒಂದು ನಿಲುವಳಿ ಸೂಚನೆಯಲ್ಲಿ ಎಲ್ಲರೂ ಭಾಗವಹಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರಣಕ್ಕಾಗಿಯೇ ತಾವು ಇದನ್ನು ನಿಯಮ 69ಕ್ಕೆ ಪರಿವರ್ತನೆ ಗೊಳಿಸಿ ತಾವು ಅವಕಾಶ ಕೊಡುವುದಾದರೆ, ಪ್ರಾಯಶಃ ಇನ್ನೊಂದು ದಿವಸವೋ ಅಥವಾ ಎರಡು ದಿವಸ ಇದರ ಬಗ್ಗೆ ಚರ್ಚೆ ನಡೆಯಲಿ, ಚರ್ಚೆ ನಡೆದರೆ ಸತ್ಯ ಸಂಗತಿ ಏನೆಂಬುದು ಇಡೀ ಜಗತ್ತಿಗೆ ಗೊತ್ತಾಗುತ್ತದೆ. ನಿರ್ವಿಕಾರ ಮನೋಭಾವದಿಂದ ಈ ಸದನವೇ ಆಗಿರಲಿ ಅಥಾವ ಸರ್ಕಾರವೇ ಆಗಿರಲಿ ಅದರ ಬಗ್ಗೆ ನಿರ್ಣಯ ತೆಗದುಕೊಳ್ಳುವುದಕ್ಕೆ ಸಾಧ್ಯತೆಯಾಗುವುದರಿಂದ ತಮ್ಮಲ್ಲಿ ನಮ್ರವಾಗಿ ವಿನಂತಿ ಮಾಡಿಕೊಳ್ಳುತ್ತೇವೆ ಮತ್ತು ಇದು ಸರ್ಕಾರದ ಅಭಿಪ್ರಾಯ ತಾವು ಅದನ್ನು ಪರಿವರ್ತನೆಗೊಳಿಸಿ ನಿಯಮ 69ರ ಕೆಳಗೆ ಚರ್ಚೆಗೆ ತಾವು ಅವಕಾಶವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇವೆ.

4.30 ಪಿಎಂ

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಬಹ ಸುದೀರ್ಘವಾದ ಚರ್ಚೆಯಾಗಬೇಕು, ಮತ್ತು ನಮ್ಮ ರಾಜ್ಯದ ಹಾಗೂ ನಾಡಿ ರೈತರ ಹಿತದೃಷ್ಟಿಯಿಂದ ಈ ಪ್ರಾಜೆಕ್ಟ್ ಅವಶ್ಯಕತೆ ಇದೆಯೋ ಅಥವ ಇಲ್ಲವೆ ಎಂಬುದೂ ಕೂಡ ತೀರ್ಮಾನವಾಗಬೇಕು. ಅದರಲ್ಲಿ ಎಲ್ಲರಿಗೂ ಬೆಳ ಚೆಲ್ಲುವುದಕ್ಕೆ ಅವಕಾಶವಿರಬೇಕು. ಈಗೇನಿದೆ, 95ನೇ ಇಸ್ವಿಯಿಂದ ಈ ಪ್ರಾಜೆ ಬಗ್ಗೆ ವ್ಯವಹಾರಗಳು ನಡೆಯುತ್ತವೆ, ಸುಮಾರು ಹತ್ತು ವರ್ಷಗಳು ಆಯಿತ ಹಾಗಾಗಿ ಸದನದ ಸದಸ್ಯರಿಗೆ ನಿಜವಾಗಿ ಇದರಲ್ಲಿ ಬೆಳಕು ಚೆಲ್ಲಬೇಕಾದ ಸರ್ಕಾರದಿಂದ ತಾವು ಎಲ್ಲಾ ಮಾಹಿತಿ ಕೊಟ್ಟರೆ ನಾವು ಎಲ್ಲರ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ. ಏನೋ ಪಾಪ ಮಾನ್ಯ ರೆಡ್ಡಿಯವ ಕಷ್ಟಪಟ್ಟು ಪೇಪರ್ಸ್ ತೆಗೆದುಕೊಂಡಿದ್ದಾರೆ. ಆದರೆ ಎಲ್ಲಾ ಶಾಸಕರು ಇದ ಸಂಬಂಧಪಟ್ಟಂಥ ಪೇಪರ್ಸ್ ತೆಗೆದುಕೊಂಡು ಚರ್ಚೆ ಮಾಡುವುದ ಸಹಾಯವಾಗಬೇಕಲ್ಲಾ. ಆದ್ದರಿಂದ ನಾನು ಸರ್ಕಾರದವರಲ್ಲಿ ಏನು ವಿನ ಮಾಡಿಕೊಳ್ಳುತ್ತೇನೆಂದರೆ, ಈ ಪ್ರಾಜೆಕ್ಟ್‌ಗೆ ಸಂಬಂಧಪಟ್ಟಂತೆ 1995ರ ಏನೊಂದು ಎಂಓಯು ಗೆ ಸಹಿ ಆಗಿದೆಯೋ ಅಲ್ಲಿಂದ ಇವತ್ತಿನವರೆಗೆ ಪ್ರಾಜೆಕ್ಟ್‌ಗೆ ಸಂಬಂಧಪಟ್ಟಂತೆ ಹೈಕೋರ್ಟ್ ಮತ್ತು ಸರ್ಕಾರದ ಕಡೆಯಿಂ ಏನೇನು ಆರ್ಡರ್ ಆಗಿದೆಯೋ ಅವೆಲ್ಲಾ ಸೇರಿಸಿ ಒಂದು ಬುಕ್‌ಲೆಟ್ ಮಾ ಒಂದೆರೆಡು ದಿವಸಗಳಲ್ಲಿ ಕೊಟ್ಟರೆ ಒಳ್ಳೆಯದು. ಹಿಂದೆ ಇದ್ದಂಥ ಯಾವು ಸರ್ಕಾರ ಮಾಡಿರತಕ್ಕಂಥ ಆರ್ಡರ್ ಕೂಡ ಇರಲಿ. ಈ ಎಲ್ಲಾ ಮಾಹಿ ಕೊಟ್ಟರೆ ಸರಿಯಾದಂಥ ಒಂದು ಬೆಳಕನ್ನು ಚೆಲ್ಲುವುದಕ್ಕೆ ಈ ಸದನದ 2 ಸದಸ್ಯರೆಲ್ಲರಿಗೂ ಅವಕಾಶವಾಗುತ್ತದೆ. ಇಲ್ಲದಿದ್ದರೆ ಏನಾಗುತ್ತೆಂದರೆ, ನಮ್ಮ ಹ ಯಾವುದೇ ಡಾಕ್ಯುಮೆಂಟ್ ಇಲ್ಲದಿದ್ದಾಗ ನಾವು ಏನು ಹೇಳುವುದಕ್ಕೆ ಆಗುತ್ತದ ರೈಟ್ ಆಫ್ ಇನ್‌ಫರ್ಮೇಷನ್ ಆಕ್ಟ್ ಕೆಳಗೆ ಸರ್ಕಾರದ ಡಾಕ್ಯುಮೆಂಟ್‌ಗಳ ತೆಗೆದುಕೊಳ್ಳಬಹುದೆಂದು ತಾವು ಹೇಳಬಹುದು. ಆದರೆ, ನಾವು ಅಪ್ಲೈ ಮಾ ಸದರಿ ಡಾಕ್ಯುಮೆಂಟ್ಸ್‌ನ್ನು ತೆಗೆದುಕೊಳ್ಳಬೇಕಾದರೆ 8–10 ದಿವಸ ಆಗುತ್ತ ಆದ್ದರಿಂದ, ಸರ್ಕಾರದ ಕಡೆಯಿಂದಲೇ ಈ ಮಾಹಿತಿಗಳನ್ನು ಸರಬರಾ

ಮಾಡಿದರೆ ಎಲ್ಲರೂ ಇದರ ಬಗ್ಗೆ ಬೆಳಕು ಚೆಲ್ಲುವುದಕ್ಕೆ ಅನುಕೂಲವಾಗುತ್ತದೆ. ನಾನು ಪೇಪರ್‌ಗಳಲ್ಲಿ ಸ್ಟೇಟ್‌ಮೆಂಟ್ ಕೊಟ್ಟಿರಬಹುದು. ಮತ್ತೆ ಅದು ಟಿ.ವಿ.ಯಲ್ಲಿಯೂ ಕೂಡ ಬಂದಿರಬಹುದು. ಮತ್ತೆ ಕನ್ನಡಪ್ರಭ ಪತ್ರಿಕೆಯಲ್ಲಿ ಅಡ್ವರ್ಟೈಸ್‌ಮೆಂಟ್ ಬಂದಿರಬಹುದು. Nobody can a take notice of that. It has came in the paper ಹಾಗಾಗಿ ಇದರ ಬಗ್ಗೆ ರೇಡಿಯೋ ಪೇಪರ್‌ಗಳಲ್ಲಿ ಮತ್ತು ಟಿ.ವಿ.ಯಲ್ಲಿ ಬಂದಿರಬಹುದು. ಮತ್ತೆ 10–15 ದಿವಸಗಳ ಹಿಂದೆ ಪ್ರಾಜೆಕ್ಟ್ ಟೇಕ್ ಓವರ್ ಅಂತ ಬಂತು. can I see that? I have no right to see that till a Bill is moved by the government, --- ಅದರ ಬಗ್ಗೆ ನಾನು ಏನನ್ನೂ ಮಾತನಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಇದರ ವಸ್ತುಸ್ಥಿತಿಯ ರೆಕಾರ್ಡ್ಸ್‌ನ್ನು ಈ ಸದನದ ಸದಸ್ಯರುಗಳಿಗೆ ನೀವು ಕೊಟ್ಟರೆ ತಕ್ಷಣ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಮತ್ತೆ ಈ ರೀತಿಯಾದಾಗ ಇದರ ಬಗ್ಗೆ ನಿಜವಾದ ಚರ್ಚೆ ಕೂಡ ಆಗುತ್ತದೆ. ಆದರೆ, ನನ್ನ ಕೈಯಲ್ಲಿ ಹದಿನೈದು ಇಪ್ಪತ್ತು ರೆಕಾರ್ಡ್ ಇಟ್ಟುಕೊಂಡು ಮಾತನಾಡಿದರೆ ಹೇಗೆ? ನಾವು ಈಗ ವಿರೋಧ ಪಕ್ಷದ ಕಡೆ ಇದ್ದೇವೆ. ನಾವು ಬೇಕಾದರೆ ಮಾಹಿತಿಗಳನ್ನು ತೆಗೆದುಕೊಳ್ಳಬೇಕೆಂದರೆ ತೆಗೆದುಕೊಳ್ಳಬಹುದು. We want time to get those papers. ಆದರೆ, ತಾವೇ ಇದನ್ನು ಸರಬರಾಜು ಮಾಡಿದರೆ ಒಳ್ಳೆಯದು. Govt also wants ---- ನಿಜವಾದ ಪರಿಸ್ಥಿತಿ ಏನು ಎಂಬುದು ಮತ್ತು ಇದರ ಸತ್ಯ ಏನು ಎನ್ನತಕ್ಕಂಥದ್ದೆಲ್ಲಾ ಗೊತ್ತಾಗಬೇಕೆಂಬ ಇಚ್ಛೆ ನಿಮ್ಮಲ್ಲಿ ಇದ್ದರೆ, ಇದಕ್ಕೆ ಸಂಬಂಧಪಟ್ಟಂಥ ಎಲ್ಲಾ ಡಾಕ್ಯುಮೆಂಟ್ಸ್‌ನ್ನು ಸರಬರಾಜು ಮಾಡಿ. ಈ ಎಲ್ಲ ಡಾಕ್ಯುಮೆಂಟ್ಸ್ ನಮ್ಮ ಕೈಗೆ ಬಂದಾಗ ಈ ಒಂದು ಚರ್ಚೆಯಲ್ಲಿ ಯಾರ್‍ಯಾರು ಭಾಗವಹಿಸುವುದಕ್ಕೆ ಆಸಕ್ತಿ ಇದೆಯೋ ಅವರಿಗೆ ಅನುಕೂಲವಾಗುತ್ತದೆ. ಮತ್ತೆ ಇದರ ಬಗ್ಗೆ ಸರಿಯಾದಂಥ ಬೆಳಕು ಚೆಲ್ಲುವುದಕ್ಕೆ ಸಾಧ್ಯವಾಗುತ್ತದೆಂದು ಮಾನ್ಯ ಅಧ್ಯಕ್ಷರಿಗೆ ನಾನು ಸಲಹೆ ಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆಯವರು ನೀಡಿರತಕ್ಕಂಥ ಸಲಹೆಯನ್ನು ನಾನೂ ಸಹ ಒಪ್ಪುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಹೇಳುವುದೇನೆಂದರೆ, ಸರ್ಕಾರದವರು ಇದರ ಬಗ್ಗೆ ಮೊದಲೇ ಒಂದು ಶ್ವೇತಪತ್ರವನ್ನು

ಹೊರಡಿಸಬೇಕಾಗಿತ್ತು. ಇದರ ಹಿನ್ನೆಲೆ ಏನು ಮತ್ತು ಹಿಂದೆ ಏನೇನು ನಡೆದಿದೆ ಎಂಬುದು ಮತ್ತು ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚನ್ಯಾಯಾಲಯ ನೀಡಿರತಕ್ಕಂಥ ತೀರ್ಪುಗಳು ಮತ್ತು ಸರ್ಕಾರ ಮಾಡಿರತಕ್ಕಂಥ ಆದೇಶಗಳು ಅಂದರೆ ಯಾರ್ಯಾರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಏನೇನು ಆದೇಶಗಳನ್ನು ಮಾಡಿದ್ದಾರೆ ಎನ್ನತಕ್ಕಂಥ ಸಮಗ್ರವಾದ ಈ ಎಲ್ಲಾ ಮಾಹಿತಿಗಳನ್ನು ಈ ಸದನದ ಮುಂದೆ ಮಂಡಿಸಿದರೆ, ಇದರ ಬಗ್ಗೆ ಬೆಳಕು ಚೆಲ್ಲುವುದಕ್ಕೆ ಅವಕಾಶವಾಗುತ್ತದೆ. ನೀವು ಮಾತನಾಡಿದ ಧಾಟಿ ನೋಡಿದಾಗ ನಿಜಕ್ಕೂ ಇದನ್ನು ತಾವು ಮಾಡುತ್ತೀರೆಂಬುದು ನನಗೆ ಅರ್ಥವಾಯಿತು. ಇದನ್ನು ಕೊಡಬಹುದು ಎನ್ನತಕ್ಕಂಥ ಭಾವನೆ ಕೂಡ ಇದೆ. ತಾವು ಇದನ್ನು ಈ ಸದನಕ್ಕೆ ಕೊಟ್ಟರೆ ಇದರ ಬಗ್ಗೆ ಸಮಗ್ರವಾಗಿ ಎಲ್ಲರೂ ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಹಾಗೆಯೇ ಇದನ್ನು ನಿಯಮ 69ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳತಕ್ಕಂಥದ್ದು ಸೂಕ್ತವೆಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು : ಸನ್ಮಾನ್ಯ ಅಧ್ಯಕ್ಷರೆ, ಈವೊಂದು ವಿಚಾರದಲ್ಲಿ ಸಮಗ್ರವಾದಂಥ ಮಾಹಿತಿಯನ್ನು ಕರ್ನಾಟಕದ ಜನತೆಗೆ ತಲುಪಿಸುವಂಥ ಒಂದು ಕೆಲಸವನ್ನು ಈ ಸದನದ ಮೂಲಕ ನಾವು ಮಾಡಲೇಬೇಕಾಗಿದೆ. ಇದರ ಬಗ್ಗೆ ಬೇಕಾದಷ್ಟು ಜನ ಬೇಕಾದಷ್ಟು ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಪ್ರತಿಕಾಮಾಧ್ಯಮದಲ್ಲಿ ಕೆಲವು ರೀತಿಯಲ್ಲಿ ಪ್ರಚಾರ ಸಿಕ್ಕುತ್ತಿರುವುದು ನೋಡಿದರೆ ನಮಗೆ ನಿಜಕ್ಕೂ ಕೂಡ ಆಶ್ಚರ್ಯವಾಗುತ್ತದೆ. ಇವತ್ತು ಒಬ್ಬ ಉದ್ಯಮಿ ಬಂದು ಸರ್ಕಾರವನ್ನೇ ಅಲುಗಾಡಿಸುವಂಥ ಮಟ್ಟದಲ್ಲಿ ಹೇಳಿಕೆಗಳನ್ನು ಕೊಡುತ್ತಿರುವುದು ಮತ್ತು ಸರ್ಕಾರ ಅದರ ಮುಂದೆ ಏನೂ ಮಾಡುವುದಕ್ಕೆ ಆಗದೆ ಇರತಕ್ಕಂಥ ಅಸಹಾಯಕತೆ ಇದೆ ಎನ್ನತಕ್ಕಂಥ ಭಾವನೆ ಜನರಲ್ಲಿ ಉಂಟಾಗಿದ್ದು, ಈ ಗೊಂದಲಕ್ಕೆ ನಾವು ತೆರೆ ಎಳೆಯಬೇಕಾಗಿದೆ. ಇದರ ಬಗ್ಗೆ ಸನ್ಮಾನ್ಯ ಶ್ರೀರಾಮರೆಡ್ಡಿಯವರು ಏನು ವಿಷಯ ಪ್ರಸ್ತಾಪ ಮಾಡುತ್ತಿದ್ದಾರೆ ಅದನ್ನು ನಿಯಮ 69ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಂಡು ಬಂದು ಸರ್ವರೂ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಏಕೆಂದರೆ ಅದರ ಬಗ್ಗೆ ನಮ್ಮಲ್ಲಿ ಒಂದಷ್ಟು ಮಾಹಿತಿ ಇದೆ. ಈ ಮಾಹಿತಿಯಲ್ಲಿ ಸರ್ಕಾರ ಏನು ಮಾಡಿದೆ ಎಂಬುದು ಮತ್ತು ಈ ಉದ್ಯಮಿ ಯಾವ ರೀತಿಯಾಗಿ ಅದನ್ನು ಪರಿವರ್ತನೆ ಮಾಡಿಕೊಂಡಿದ್ದಾರೆ ಎಂಬುದು ಮತ್ತು ಇದರಿಂದ ಈ ರಾಜ್ಯದ ಬೊಕ್ಕಸಕ್ಕೆ ಎಷ್ಟು ಅನ್ಯಾಯವಾಗಿದೆ ಎನ್ನತಕ್ಕಂಥ ಸಮಗ್ರವಾದಂಥ ವಿಚಾರವನ್ನು ಕರ್ನಾಟಕ ರಾಜ್ಯದ ಜನತೆಗೆ ನಾವು ಹೇಳಬೇಕಾಗಿದೆ. ಈ ಒಂದು ವಿಚಾರವನ್ನು ನಾವು ಈ

ಸದನದ ಮೂಲಕವೇ ಹೇಳಬೇಕಾಗುತ್ತದೆ. ಈ ಒಂದು ಹಿನ್ನೆಲೆಯಲ್ಲಿ ಗೌರವಾನ್ವಿತ ಸದಸ್ಯರೆಲ್ಲರೂ ಈ ಒಂದು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ತಾವು 69ರ ನಿಯಮದಡಿಯಲ್ಲಿ ಅವಕಾಶವನ್ನು ಕೊಡಬೇಕೆಂದು ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಸದಸ್ಯರೆಲ್ಲರಿಗೂ ಮಾಹಿತಿ ಕೊಡಬೇಕೆಂದು ಮಾನ್ಯ ದೇಶಪಾಂಡೆಯವರು ಹೇಳಿರತಕ್ಕಂಥದ್ದಕ್ಕೆ ನನ್ನ ಸಹಮತ ಕೂಡ ಇದೆ. ಚರ್ಚೆಗೆ ತೆಗೆದುಕೊಳ್ಳತಕ್ಕಂಥ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಸದಸ್ಯರೆಲ್ಲರಿಗೂ ಮಾಹಿತಿಗಳನ್ನು ಬುಕ್‌ಲೆಟ್ ಮಾಡಿ ಕೊಟ್ಟು ಅನಂತರ ಚರ್ಚೆ ಮಾಡಿಸಿ ಎನ್ನತಕ್ಕಂಥ ಒಂದು ಪರಿಸ್ಥಿತಿ ಈ ಶಾಸನಸಭೆಯಲ್ಲಿ ನಿರ್ಮಾಣ ಮಾಡಬೇಕೋ ಅಥವಾ ಬೇಡವೋ ಎನ್ನತಕ್ಕಂಥದ್ದನ್ನು ನಿಮಗೆ ಬಿಡುತ್ತೇವೆ. ನಮಗೆ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ ಆದ್ದರಿಂದ ನಮಗೆ ಮಾಹಿತಿಯನ್ನು ಕೊಡಬೇಕೆಂದರೆ ಇನ್ನೊಂದು ಬುಕ್‌ಲೆಟ್ ಈ ಸದನದ ಮುಂದೆ ಬರಬೇಕಾಗುತ್ತದೆ. ಅದೇನೆಂದರೆ, ಈ ಪ್ರಾಜೆಕ್ಟ್ ಬಗ್ಗೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಯಾವ್ಯಾವ ಸದಸ್ಯರು ಈ ಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಏನೇನು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಎನ್ನತಕ್ಕಂಥ ಮಾಹಿತಿ ಕೊಡಬೇಕಾಗುತ್ತದೆ. ಅವರು ಈಗಾಗಲೇ ಹೇಳಿದ ಹಾಗೆ 1994–1995ರಿಂದ ಇಲ್ಲಿಯವರೆಗೆ ಅನೇಕ ಬಾರಿ ಇದರ ಬಗ್ಗೆ ಚರ್ಚೆಯಾಗಿರತಕ್ಕಂಥ ವಸ್ತು ಇದಾಗಿದೆ. ಕಾಲಕಾಲಕ್ಕೆ ಇದರ ಬಗ್ಗೆ ಯಾರ್ಯಾರು ಏನೇನು ಪಾತ್ರವನ್ನು ವಹಿಸಿದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ಕೂಡ ಒಂದು ಶ್ವೇತಪತ್ರವನ್ನು ಹೊರಡಿಸಬೇಕು. ಇದು ಬಹಳ ಮುಖ್ಯವಾದದು. ಏಕೆಂದರೆ, ನಮ್ಮ ಕಮಿಟ್‌ಮೆಂಟ್, ನಮ್ಮ ಮಾತು, ನಮ್ಮ ಪಕ್ಷಗಳ ಸಿದ್ಧಾಂತ ಎಲ್ಲೆಲ್ಲಿದ್ದಾಗ ಹೇಗೆ ಇರುತ್ತದೆಂಬುದು ನನಗೆ ಅರ್ಥವಾಗಬೇಕು. ನಾವು ಅಲ್ಲಿ ಕುಳಿತುಕೊಂಡಾಗ ಏನು ಮಾತನಾಡಿರುತ್ತೇವೆ, ಇಲ್ಲಿ ಕುಳಿತುಕೊಂಡಾಗ ಏನು ಮಾತನಾಡಿರುತ್ತೇವೆಂದು ಹಾಗೆಯೇ ಇನ್ನೊಂದು ಕಡೆ ಕುಳಿತುಕೊಂಡಾಗ ಏನು ಮಾತನಾಡಿರುತ್ತೇವೆ ಎನ್ನತಕ್ಕಂಥದ್ದು ಈ ಸಭೆಯ ಮುಂದೆ ಬರಬೇಕಾಗುತ್ತದೆ. ಇದರ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿದ್ದಾಗ ಯಾರ್ಯಾರದ್ದು ಏನೇನು ಪಾತ್ರಾಭಿನಯ ಇದೆ ಎಂಬುದು ಮತ್ತು ಅಪ್ಪರ್ ಹೌಸ್‌ನಲ್ಲಿ ಇದರ ಬಗ್ಗೆ ಏನೇನು ಪಾತ್ರಾಭಿನಯ ಆಗಿದೆ ಎಂಬುದು ಮತ್ತು ಈ ಒಂದು ಪ್ರಾಜೆಕ್ಟ್‌ನಿಂದ ಏನೇನು ಆಗುತ್ತದೆಂದು ಯಾರ್ಯಾರು ವ್ಯಾಖ್ಯಾನಿಸಿದ್ದಾರೆ ಎನ್ನತಕ್ಕಂಥ ಮಾಹಿತಿ ಕೂಡ ಇಲ್ಲಿಗೆ ಬರಲಿ. ನಾವು ಅದನ್ನು ಸ್ವಾಗತ ಮಾಡುತ್ತೇವೆ. ಒಂದು ವಿಷಯವನ್ನು

ಮಾತ್ರ ನಾನು ನಮ್ರತೆಯಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಇಲ್ಲಿ ಪ್ರಸ್ತಾಪ ಮಾಡತಕ್ಕಂಥ ವಿಷಯಗಳಿಗೆಲ್ಲಾ ಸರ್ಕಾರ ಮಾಹಿತಿ ಒದಗಿಸಿಕೊಡಬೇಕೆಂದು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಬಯಸಬಾರದು. ಮಾಹಿತಿ ತೆಗೆದುಕೊಳ್ಳತಕ್ಕಂಥದ್ದು ಅವರ ಕೆಪ್ಯಾಸಿಟಿ. ಈಗ ಅವರ ವ್ಯಂಗ್ಯಗಳು ನಮಗೆ ಅರ್ಥವಾಗುತ್ತದೆ. ಯಾರು ಕೊಟ್ಟಿದ್ದಾರೆಯೋ ಅಥವಾ ಯಾರು ನೋಟ್ ರೆಡಿ ಮಾಡಿಸಿದ್ದಾರೆಂಬುದು ಮತ್ತು ರೆಡ್ಡಿಯವರೇ ಆ ರೀತಿ ಹೇಳಿ, ಈ ರೀತಿ ಹೇಳಿ ಎಂದು ಮಾನ್ಯ ರಮೇಶ್‌ಕುಮಾರ್‌ರವರು ನಮ್ಮ ಮೇಲೆ ಏನೂ ವ್ಯಂಗ್ಯವನ್ನು ಮಾಡಬೇಕಾಗಿಲ್ಲ. ನಾವೂ ಕೂಡ ಆ ಸ್ಕೂಲ್‌ನಲ್ಲಿ, ಗರಡಿ ಯಲ್ಲಿಯೇ ಬೆಳೆದು ಬಂದವರು. ಆದ್ದರಿಂದ ಅವರೂ ಕೂಡ ಅದೇ ಗರಡಿ ಯಿಂದ ಅವರು ತೆಗೆದುಕೊಳ್ಳಲಿ. ನಾವೇನೂ ಬೇಡವೆಂದು ಹೇಳಲಿಲ್ಲವಲ್ಲ. ಮಾಹಿತಿಯನ್ನು ತೆಗೆದುಕೊಳ್ಳುವುದೂ ಒಂದು ಕಲೆ. ಮತ್ತೆ ಮಾತನಾಡುವುದು ಇನ್ನೊಂದು ಕಲೆ. ಹಾಗೆಯೇ ಪ್ರೆಸೆಂಟೇಶನ್ ಮಾಡತಕ್ಕಂಥದ್ದು ಮತ್ತೊಂದು ಕಲೆ. ಮಾಹಿತಿಯನ್ನು ಯಾರೋ ಕೊಟ್ಟು ಮಾತನಾಡಿಸುತ್ತಾರೆ ಎಂದು ಒಂದು ಪ್ರಿವಿಲೇಜ್ ಆಗತಕ್ಕಂಥ ಮಟ್ಟಕ್ಕೆ ನಾವು ಹೋಗಬಾರದು. ಇವತ್ತು ನನ್ನ ಅಭಿಪ್ರಾಯಗಳನ್ನು ಹೇಳುತ್ತಿದ್ದೇನೆ. ಅಂದರೆ ವ್ಯಂಗ್ಯಗಳನ್ನು ಸ್ವೀಕರಿಸಿ ಈ ಮಾತನ್ನು ಹೇಳುತ್ತಿದ್ದೇನೆ. ಅಂದರೆ ವ್ಯಂಗ್ಯಗಳನ್ನು ಸ್ವೀಕರಿಸಿ ಈ ಮಾತನ್ನು ಹೇಳುತ್ತಿದ್ದೇವೆ. ಮಾಹಿತಿ ನಮಗೆ ಯಾರಾದರೂ ಕೊಡಲಿ ಅಥವಾ ಮಾಹಿತಿ ನಮಗೆ ಎಲ್ಲಿಂದಲಾದರೂ ಬರಲಿ. ನಾವು ಇಲ್ಲಿ ನಿಂತುಕೊಂಡಿರುವುದು ಆ ಕೇಸ್‌ನ್ನು ಇಲ್ಲಿ ಪ್ರಸೆಂಟ್ ಮಾಡುವುದಕ್ಕೆ. ಮತ್ತೆ ಇಡೀ ಸರ್ಕಾರದ ದಾಖಲೆಗಳನ್ನು ನಮ್ಮಷ್ಟಕ್ಕೆ ನಾವೇ ಹೋಗಿ ತಂದೆವು ಎಂಬುದು ಅದರ ಅರ್ಥವಲ್ಲ. ಇದರಿಂದ ನೊಂದವರು, ಬೆಂದವರು, ಕಷ್ಟಪಟ್ಟವರು ಇದ್ದಾರೆ. ಮತ್ತೆ ಕೋರ್ಟ್‌ಗೆ ಹೋದವರು ಇದ್ದಾರೆ. ಹಾಗೆಯೇ ಇದರಿಂದ ಭೂಮಿಯನ್ನು ಕಳೆದುಕೊಂಡವರು ಇರುತ್ತಾರೆ. ಎಷ್ಟು ಜನ ಟ್ರಾನ್ಸ್‌ಫರೆನ್ಸಿ ಆಕ್ಟ್ ಕೆಳಗಡೆ ಅರ್ಜಿ ಹಾಕಿ ನನಗೆ ಮಾಹಿತಿ ತಂದು ಕೊಟ್ಟಿದ್ದಾರೆ ಎನ್ನತಕ್ಕಂಥ ಮಾಹಿತಿಯನ್ನು ನಾನು ತಮಗೆ ಕೊಡುತ್ತೇನೆ. ಮತ್ತೆ ಈ ಮಾಹಿತಿಗಳನ್ನು ಹೈ ಕೋರ್ಟ್‌ಗೆ ಕೊಡುವುದಕ್ಕೋಸ್ಕರ ಟ್ರಾನ್ಸ್‌ಫರೆನ್ಸಿ ಆಕ್ಟ್ ಕೆಳಗಡೆ ಎಷ್ಟು ಜನ ಅರ್ಜಿ ಹಾಕಿದ್ದರು ಎಂಬ ಮಾಹಿಯನ್ನೂ ಸಹ ಕೊಡುತ್ತೇನೆ. ಈ ಎಲ್ಲಾ ಮಾಹಿತಿಗಳನ್ನು ಸಂಗ್ರಹ ಮಾಡಿಕೊಂಡು ಬಂದ ಮೇಲೆ ಇಲ್ಲಿ ಚರ್ಚೆ ಮಾಡಬೇಕು. ಒಂದು ನಿಲುವಳಿ ಸೂಚನೆ ಮೂವ್ ಮಾಡಿ ಚರ್ಚೆ ಪ್ರಾರಂಭವಾದ ಮೇಲೆ ಸರ್ಕಾರದವರು ಇದರ ಮಾಹಿತಿ ಕೊಡಿ, ಇದರ ಆಧಾರದ ಮೇಲೆ ನಾವು

ಮಾತನಾಡುತ್ತೇವೆಂದರೆ ಹೇಗೆ? ನಿಲುವಳಿ ಸೂಚನೆಯ ಮೇಲೆ ಚರ್ಚೆ ಆಗತಕ್ಕಂಥ ವಿಷಯಗಳನ್ನು ಸರ್ಕಾರ ಡಿಫೆಂಡ್ ಮಾಡಿಕೊಳ್ಳಬೇಕು. ಮತ್ತೆ ಅವರ ಹತ್ತಿರ ಮಾಹಿತಿ ಕೂಡ ಇರಬೇಕಾಗಿತ್ತು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಒಂದು ನಿಲುವಳಿ ಸೂಚನೆ ಬಂದರೆ ಸರ್ಕಾರ ಡಿಫೆನ್ಸ್‌ನಲ್ಲಿ ಬೀಳುತ್ತದೆ. ಇದು ಎಂಥ ಸನ್ನಿವೇಶವೆಂದರೆ, ಈ ಸದನದಲ್ಲಿ ಆ ಉದ್ಯಮಿ ಪರವಾಗಿ, ಸಂಸ್ಥೆಯ ಪರವಾಗಿ ವಕಾಲತ್ ಹಾಕುವುದಕ್ಕೆ ನನಗೆ ತಿಳಿದ ಹಾಗೆ ಈ ಸದನದಲ್ಲಿ ಯಾರೂ ಇಲ್ಲ. ಇಂಪಾಸಿಬಲ್ We are the last people. ಆ ಕರ್ಮವನ್ನು ನಾನೇಕೆ ಹೊತ್ತು ಕೊಳ್ಳಲಿ? ನಾನು ಏನು ಹೇಳುವುದೇನೆಂದರೆ, ಆತ ಇಷ್ಟು ಪ್ರಬಲಸ್ತ ಆಗುವುದಕ್ಕೆ ಯಾರ್‍ಯಾರು ಯಾವ ಯಾವ ಹೊತ್ತಿಗೆ ಆತನಿಗೆ ಗ್ಲೂಕೋಸ್ ಕೊಟ್ಟರು ಎಂಬುದು ತಿಳಿಯಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ಗ್ಲೂಕೋಸ್ ಕೊಟ್ಟರೋ ಅಥವಾ ವೆಂಟಿಲೆಟರ್‌ನಲ್ಲಿ ಇಟ್ಟಿದ್ದರೋ ಮತ್ತೆ ಗ್ಲೂಕೋಸ್ ತೆಗೆದುಕೊಳ್ಳುತ್ತೇವೆಂದವರಿಗೆ ಇಲ್ಲವೆಂದನೋ ಆತನೇ ಏನಾದರೂ ಕೊಟ್ಟಿದ್ದಾನೆಯೋ...

Sri K.R. Ramesh Kumar: Government is also an interested party in this. ಇವೆಲ್ಲಾ ಹೊರಗಡೆ ಬರಬೇಕೆಂದು ಅವರಿಗೂ ಕೂಡ ಇದೆ.

ಶ್ರೀ ಹೆಚ್.ಆಂಜನೇಯ: ಮತ್ತೆ ಅವರಿಗೆ ಯಾರ್‍ಯಾರು ಗನ್ ಮ್ಯಾನ್ ಆಗಿದ್ದರು ಎನ್ನತಕ್ಕಂಥ ವಿಷಯ ಕೂಡ ಹೊರಕ್ಕೆ ಬರಲಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಈ ವಿಷಯಕ್ಕೆ ಸಂಬಂಧಪಟ್ಟಂತೆ ಇಡೀ ಸದನ ಒಂದಾಗಿದ್ದೇವೆ. ಆದ್ದರಿಂದ ಇದರಲ್ಲಿರತಕ್ಕಂಥ ಅಪರಾಧಿಗಳು ಹೊರಕ್ಕೆ ಬರಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಪರಾಧಿಗಳು ಹೆಸರನ್ನು ಇಲ್ಲಿ ಹೇಳಿದಾಗ, ಅವರು ತಮ್ಮನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಬೇಕಾದ ಮಾಹಿತಿಗಳೆಲ್ಲವನ್ನೂ ಇಟ್ಟುಕೊಂಡಿರುತ್ತಾರೆ. ಇಲ್ಲದಿದ್ದರೆ ತೆಗೆದುಕೊಳ್ಳುತ್ತಾರೆ. There are sources to recover those documents. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಶ್ವೇತ ಪತ್ರ ತಂದು ಅಥವಾ ಇದಕ್ಕೆ ಸಂಬಂಧಪಟ್ಟಂಥ ಮಾಹಿತಿಯನ್ನು ಸರ್ಕಾರ ಒದಗಿಸುವುದು, ಸರ್ಕಾರ ಊಟ ಹಾಕಿ ಜನತೆ ಎಷ್ಟು ಇದ್ದಾರೆಂದು ಎಣಿಸಿ ಕೊಳ್ಳುವಂಥ ಸ್ಥಿತಿ ಸರ್ಕಾರ ಮಾಡಬೇಕೆಂದು ನನಗೇನೂ ಅನಿಸುತ್ತಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಂದು ತಮಾಷೆಯ ಮಾತನ್ನು ಹೇಳುತ್ತಾರೆ. ಅದೇನೆಂದರೆ, ಗುಲ್ಬರ್ಗದ ಕಡೆ ಇರುವ ಹೋಟಲ್‌ನಲ್ಲಿ ಚಹಾ ಸರಬರಾಜು ಮಾಡುತ್ತಿರುತ್ತಾರಂತೆ. ನಮ್ಮಂತವನ್ನು ಜೇಬಿನಲ್ಲಿ ದುಡ್ಡು ಇಲ್ಲದೆ ಇರತಕ್ಕಂಥವನ್ನು ನೀರು ಕುಡಿಯುವುದಕ್ಕೆ ಹೋಟಲ್‌ಗೆ ಹೋಗುತ್ತಾನಂತೆ. ಗ್ರಹಚಾರಕ್ಕೆ ನೀರಿನ ಗ್ಲಾಸ್ ಕಳೆಗೆ ಬಿದ್ದು ಹೋಗುತ್ತದೆ. ಆತ ಏನೂ ತಿನ್ನತ್ತಿಲ್ಲ, ಕುಡಿಯಲಿಲ್ಲ. ಕೌಂಟರ್ ನಲ್ಲಿರತಕ್ಕಂಥವನಿಗೆ ಸಪ್ಲೈಯರ್ ಆತನ ಬಿಲ್ ಹೇಳುತ್ತಾನೆ. ಏನೆಂದರೆ, "ನೌಖಾಯಾನ ಪಿಯಾನಾ ಗ್ಲಾಸ್ ತೊಡಬಾರಾನ್" "ಆತ ತಿನ್ನಲಿಲ್ಲ, ಕುಡಿಯಲಿಲ್ಲ. ಆದರೆ ಆ ಗ್ಲಾಸ್ ಕಳಕ್ಕೆ ಬೀಳಿಸಿದ್ದಾನೆ. ಆದ್ದರಿಂದ ಹನ್ನೆರಡಾಣೆ ಈತನಿಂದ ತೆಗೆದುಕೊ ಎಂದು ಹೇಳುತ್ತಾನೆ. "ನಾವು ಖಾಯನಾಪಿಯಾ ಗ್ಲಾಸ್ ತೊಡ ಬಾರಾನಾ" ಆದ್ದರಿಂದ, ನಾವೇನು ಯಾರಿಗೂ ಡಿಫೆಂಡ್ ಮಾಡಿಕೊಳ್ಳತಕ್ಕಂಥದ್ದು ಏನೂ ಇಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಹನ್ನೆರಡಾಣೆ... ಖಾನಾಕಾ ಪಿನಾಬಾನಹಿ ಟೂಟ್‌ನಕಾ"

ಶ್ರೀ ಕೆ.ಆರ್.ರಮೇಶ್ ಕುಮಾರ್ : ನಾನು ಅದನ್ನೇ ಹೇಳುತ್ತಿರುವುದು. ಖಾಯಪೀಯ ಮಾಡಿರುವವರು ಬೇರೆ ಇರುತ್ತಾರೆ. ಆದರೆ ನಾವು ಬರೀ ಗ್ಲಾಸ್ ಒಡೆದು ಹಾಕಿರುವವರಷ್ಟೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಗ್ಲಾಸ್ ಒಡೆದು ಹಾಕಿರುವವರು ಅವರೇ...

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಗ್ಲಾಸ್ ಒಡೆದವರು ಯಾರೆಂಬುದು ಸ್ಪಷ್ಟ ಆಯಿತು. ಗ್ಲಾಸ್ ಒಡೆದು ಹಾಕಿದ್ದೇವೆಂದು ಒಪ್ಪಿಕೊಳ್ಳುತ್ತಿದ್ದಾರೆ.

ಶ್ರೀ ಎನ್.ಚೆಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಪ್ರಿಲಿಮಿನರಿ ಸಬ್‌ಮಿಷನ್‌ನ್ನು ಅವರು ಮಾಡುತ್ತಿದ್ದಾರೆ. ಇದರ ಬಗ್ಗೆ ಡೀಟೇಲ್ ಆಗಿ ಚರ್ಚೆಯಾಗಲಿ ನಮಗೂ ಕೂಡ ಸಂತೋಷವೆಂದು ಸರ್ಕಾರದವರೂ ಕೂಡ ಹೇಳುತ್ತಿದ್ದಾರೆ. ಆದರೆ, ಇದರಲ್ಲಿ ಮಾನ್ಯ ರಮೇಶ್‌ಕುಮಾರ್‌ರವರು ಬಹಳ ಮಧ್ಯ ಪ್ರವೇಶ ಮಾಡುತ್ತಿದ್ದಾರೆ..

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಪರವಾಗಿ ಅವರು ಮಧ್ಯ ಪ್ರವೇಶ ಮಾಡುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರೇನೂ ಈಗ ಮಧ್ಯ ಪ್ರವೇಶ ಮಾಡಿರತಕ್ಕಂಥದ್ದಲ್ಲ. ಅವರೂ ಆಗಲೂ ಕೂಡ ಮಧ್ಯ ಪ್ರವೇಶ ಮಾಡಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಇದರಲ್ಲಿರತಕ್ಕಂಥ ವಿಷಯಗಳನ್ನು ಬೆಳಕಿಗೆ ತರುವುದಕ್ಕೆ ನಾವು ಸ್ವಾಗತ ಮಾಡುತ್ತೇವೆಂದು ನಾವು ಆಗಲೂ ಕೂಡ ಹೇಳಿದ್ದೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಇದರ ಬಗ್ಗೆ ನಿಮಗೆ ಸಂದರ್ಭಾನುಸಾರವಾಗಿ ಆಸಕ್ತಿ ಬಂದಿದೆ. ನೀವು ನಿಮ್ಮ ಸಂಸ್ಥೆಯಲ್ಲಿರತಕ್ಕಂಥವರು ಒಂದಲ್ಲೊಂದು ಸಂದರ್ಭದಲ್ಲಿ ಇದರ ಹೊರಗೆ, ಒಳಗೆ ಇದ್ದವರು. ಆದರೆ ನಾನು ಯಾವತ್ತೂ ಕೂಡ ಇದರ ಪರಿಸರದಲ್ಲಿ ಇದ್ದವನಲ್ಲ. ಇದರಿಂದ ನಾನು ಕಳೆದುಕೊಳ್ಳುವುದೂ ಏನೂ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಆದರೆ, ನೀವು ಗ್ಲಾಸ್ ಒಡೆದುಬಿಟ್ಟಿದ್ದೀರಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಜಯಪ್ರಕಾಶ್ ಹೆಗ್ಡೆ ರವರು ಹೇಳಿದ ಹಾಗೆ ನಾನು ಗ್ಲಾಸ್ ಒಡೆದು ಹಾಕಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಚರ್ಚೆಗೆ ಅವಕಾಶ ಮಾಡಿಕೊಟ್ಟು ಸರ್ಕಾರದ ಮಾಹಿತಿ ತೆಗೆದುಕೊಳ್ಳುವುದು ಬಿಡುವುದು ಅವರಿಗೆ ಬಿಟ್ಟಿದ್ದು, ಕೊಡುವುದು ಬಿಡುವುದು ಅವರಿಗೆ ಬಿಟ್ಟಿದ್ದು, ಬುಕ್‌ಲೇಟ್ ಆಗಬೇಕು ಅದೆಲ್ಲಾ ಮಾಹಿತಿ ಕೊಡಬೇಕು, ಅವರಿಗೆ ಬಿಟ್ಟಿದ್ದು ಒಟ್ಟಿನಲ್ಲಿ ಚರ್ಚೆಯಾಗಬೇಕು.

ಶ್ರೀ ಹೆಚ್.ಡಿ.ಬಸವರಾಜು : ಮಾನ್ಯ ಅಧ್ಯಕ್ಷರೆ, ಸರ್ಕಾರದ ವತಿಯಿಂದ ಎಲ್ಲಾ ಮಾಹಿತಿಯನ್ನು ಒದಗಿಸುವುದಾದರೆ, ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ ಏನು ಉಳಿಯುತ್ತದೆ? ಆದ್ದರಿಂದ ಯಾರ್ಯಾರು ಮಾಹಿತಿಯನ್ನು ಪಡೆಯಬೇಕಾಗಿರುತ್ತದೆ, ಅದರಲ್ಲಿ ಆಸಕ್ತರಾಗಿರುತ್ತಾರೆ, ಅವರು ಪಡೆದು ಕೊಳ್ಳಲಿ. ಅದಕ್ಕಾಗಿ ಸರ್ಕಾರ ಎಲ್ಲಾ ಮಾಹಿತಿಯನ್ನು ಎಲ್ಲರಿಗೂ ಒದಗಿಸಬೇಕೆಂದು ಏನಿಲ್ಲ. ಎಲ್ಲಾ ಮಾಹಿತಿಯನ್ನು ಒದಗಿಸಿಬಿಟ್ಟರೆ ಇಲ್ಲಿ ಚರ್ಚೆಗೆ ಏನಿರುತ್ತದೆ? ಆಸಕ್ತರು ಮಾಹಿತಿಯನ್ನು ಪಡೆದುಕೊಂಡುಬರುತ್ತೇವೆ. ನಮಗೆ ಏನು ಮಾಹಿತಿ ಬೇಕಾಗಿದೆ, ಯಾವ ರೀತಿ ಈ ಸರ್ಕಾರಕ್ಕೆ ಅನ್ಯಾಯವಾಗಿದೆ, ಯಾವ ರೀತಿ ಜನರಿಗೆ ತೊಂದರೆಯಾಗುತ್ತಿದೆ ಈ ಒಂದು ಲೂಟಿಯಿಂದ ಎನ್ನುವ ಸಾಮರ್ಥ್ಯ ನಮಗೆ ಇದೆ. ಅದನ್ನು ನಾವು ಪ್ರತಿಪಾದನೆ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು : ಈಗ ಏನು ನಿಲುವಳಿ ಸೂಚನೆಯನ್ನು ಮಾನ್ಯ ಶ್ರೀರಾಮ ರೆಡ್ಡಿಯವರು ತಂದಿದ್ದಾರೆ, ಅದನ್ನು ರೂಲ್ 69ರ ಕೆಳಗಡೆ ಚರ್ಚೆ

ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ಅದನ್ನು ನಾಳೆ ದಿವಸ ತೆಗೆದುಕೊಳ್ಳೋಣ. ಆಗಲೇ 4.30 – 4.40 ಆಯಿತು. 4–5 ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್ : ಸರ್ ಒಂದು ನಿಮಿಷ. ತಾವು ರೂಲ್ 69 ಕಳೆಗಡೆ ಚರ್ಚೆ ಮಾಡುವುದಕ್ಕೆ ಅಲೌ ಮಾಡಿದ್ದೀರಿ. ಗೌರ್ನಮೆಂಟ್ ಒಂದು ಸ್ಟೇಟ್‌ಮೆಂಟ್ ಮಾಡಿ ಅದರ ಮೇಲೆ ಡಿಸ್‌ಕಸ್ ಮಾಡಿದ್ದರೆ ಈಜೀ ಯಾಗುತ್ತಿತ್ತು..

ಶ್ರೀ ಆರ್.ವಿ. ದೇಶಪಾಂಡೆ : ನಾವು ರೆಕಾರ್ಡ್ ಕೊಡಿ ಅಂತ ಕೇಳಿದ್ದೇವೆ. ಅವರು ಇಲ್ಲ ಅಂತ ಹೇಳಲಿ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಚರ್ಚೆಗಿಂತ ಮೊದಲು ಬಸ್‌ದರ ಏರಿಕೆಯಾಗಿದೆ, ಕರ್ನಾಟಕ ರಾಜ್ಯದಲ್ಲಿ ಹಾಹಾಕಾರ ಎದ್ದಿದೆ. ಬಸ್‌ದರ ಏರಿಕೆಯಾಗಿರುವುದರಿಂದ ಸಾಮಾನ್ಯ ಜನರು ಬದುಕುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದರ ಬಗ್ಗೆ ಚರ್ಚೆ ಮಾಡಬೇಕೆಂದು ನಾನು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ನಿಮ್ಮ ಹತ್ತಿರ ಮುಂಜಾನೆ ಮನವಿಯನ್ನು ಮಾಡಿದ್ದೇವೆ. ದಯವಿಟ್ಟು ನಮಗೆ ಇಬ್ಬರಿಗೂ ಅವಕಾಶವನ್ನು ಮಾಡಿಕೊಡ ಬೇಕು.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ಆಗಲೇ ಸಮಯ 4.40 ಆಗಿರುವುದರಿಂದ ಸಮಯವನ್ನು ವೇಸ್ಟ್ ಮಾಡಿಕೊಳ್ಳಬೇಡಿ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಇಡೀ ರಾಜ್ಯದ ಜನತೆಗೆ ಅನ್ಯಾಯವಾಗಿದೆ.

ಅಧ್ಯಕ್ಷರು : ನೀವು ಅದರ ಬಗ್ಗೆ ಅವಕಾಶವನ್ನು ಕೊಡಬೇಕೆಂದು ಅನ್ನುತ್ತಿರೋ; ಸುಮ್ಮನೆ ಈ ರೀತಿ ಮಾಡಿಕೊಂಡು ಹೊರಗಡೆ ಹೋಗಬೇಕೆಂದು ಅನ್ನುತ್ತಿದ್ದಿರೋ?

ಶ್ರೀ ವಾಟಾಳ್ ನಾಗರಾಜ್ : ನಿಮ್ಮನ್ನು ಕೇಳಿದ್ದೇವಲ್ಲಾ ಸ್ವಾಮಿ:

ಅಧ್ಯಕ್ಷರು : ಆಯಿತು, ಕೊಡುತ್ತೇನೆ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಯಾವಾಗ ಕೊಡುತ್ತೀರಿ ಸ್ವಾಮಿ? ಮಾನ್ಯ ಸಾರಿಗೆ ಸಚಿವರು ಇದ್ದಾರೆ.

ಅಧ್ಯಕ್ಷರು : ಈಗ ಕೊಡುತ್ತೇನೆ ಕುಳಿತುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆ ಯವರು ಹಾಗೂ ಡಿ.ಆರ್. ಪಾಟೀಲ್‌ರವರು ಎಲ್ಲರೂ ಕೂಡ ಈ ವಿಚಾರದಲ್ಲಿ ಮಾಹಿತಿಯನ್ನು ಇದರ ಬಗ್ಗೆ ಕೊಡಬೇಕೆಂದು ಪ್ರಸ್ತಾಪವನ್ನು ಮಾಡಿದ್ದಾರೆ. ಇಲ್ಲಿ ತಾವು ಯೋಚನೆ ಮಾಡಬೇಕು, ನಮ್ಮಲ್ಲಿ ಪಾರದರ್ಶಕ ಕಾಯಿದೆ ಇದೆ. ಇದರ ಬಗ್ಗೆ ಕೂಡ ಮಾನ್ಯ ದೇಶಪಾಂಡೆಯವರು ಹೇಳಿದರು. ಈಗ ನಾವು ಅರ್ಜಿಯನ್ನು ಕೊಟ್ಟರೆ ಅದು 8–10 ದಿವಸ ಆಗಬಹುದು ಎನ್ನುವ ಮಾತನ್ನೂ ಸಹ ಹೇಳಿದ್ದಾರೆ. ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಉತ್ತರವನ್ನು ಕೊಡುವಾಗ ಇದು ಸಮಗ್ರವಾದಂಥ ವಿಚಾರದಲ್ಲಿ ಚರ್ಚೆಯಾಗುತ್ತ ದೆಂದು ಹೇಳಿ, ಕಳೆದ 15 ದಿವಸಗಳಿಂದ ಈ ವಿಚಾರದ ಬಗ್ಗೆ ಚರ್ಚೆ ಕೂಡ ನಡೆಯುತ್ತದೆ. ಯಾರ್‍ಯಾರು ಆಸಕ್ತರಾಗಿದ್ದಾರೆ ಅವರು ಅದರ ಮಾಹಿತಿಯನ್ನು ಸಂಗ್ರಹ ಮಾಡಿಕೊಳ್ಳತಕ್ಕಂಥದ್ದು ಅವರ ಕರ್ತವ್ಯಗಳು. ಈಗ ಉದಾಹರಣೆಗೆ ತಾವು ಹೇಳಿದಂತೆ 25ನೇ ಆಗಸ್ಟ್ 1997ರಲ್ಲಿ ಇದೇ ಸದನದಲ್ಲಿ ಚರ್ಚೆಯಾಗಿದೆ. ಅದರ ಮಾಹಿತಿ ಇದೆ. ಆಗ ನಾನು ಸರ್ಕಾರದಲ್ಲಿ ಇರಲಿಲ್ಲ. ನಾವು ಆ ಮಾಹಿತಿಯನ್ನು ತರಿಸಿಕೊಂಡಿದ್ದೇವೆ. ಅದೇ ರೀತಿಯಾಗಿ 22 ಆಗಸ್ಟ್ 1997ರಿಂದ ಕೌನ್ಸಿಲ್‌ದಲ್ಲಿ ಚರ್ಚೆಯಾಗಿರತಕ್ಕಂಥದ್ದು ಅದಕ್ಕೆ ಮಾನ್ಯ ಉದಾಸಿಯವರಿಂದ ಹಿಡಿದು ಮಾನ್ಯ ಯಡಿಯೂರಪ್ಪನವರು, ಎಲ್ಲರೂ ಕೂಡ ಕೌನ್ಸಿಲ್‌ನಲ್ಲಿ ನಾವೆಲ್ಲರೂ ಇದರ ಬಗ್ಗೆ ಮಾತನಾಡಿರುವುದು ಇದರಲ್ಲಿ ಇದೆ. ಅದಕ್ಕೆ ಸಂಬಂಧಪಟ್ಟಿರುವಂತಹ ವರದಿಗಳು ಇದೆ. ಅದೇ ರೀತಿಯಾಗಿ ಬೇರೆ ಬೇರೆ ಕೇಸ್‌ಗಳಿಗೆ ಸಂಬಂಧಪಟ್ಟಂತೆ ಸೋಮಶೇಖರ್ ರೆಡ್ಡಿಯವರ ಕೇಸಿನಿಂದ ಹಿಡಿದು ಪ್ರತಿಯೊಂದು ಜಡ್ಜ್‌ಮೆಂಟ್ ಇದೆ. ಆ ಜಡ್ಜ್‌ಮೆಂಟ್‌ಗಳು ಪ್ರತಿಯೊಬ್ಬರ ಕೈಯಲ್ಲಿ ಇದೆ. ಫ್ರೇಮ್‌ವರ್ಕ್ ಅಗ್ರಿಮೆಂಟ್ ಎನ್ನುವುದರ ಬಗ್ಗೆ ಈಗಾಗಲೇ ಎಲ್ಲರೂ ತಿಳಿದುಕೊಂಡಿದ್ದೇವೆ. ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರಾಜೆಕ್ಟ್ ಫ್ರೇಮ್‌ವರ್ಕ್ ಅಗ್ರಿಮೆಂಟ್ 3ನೇ ಏಪ್ರಿಲ್ 1997ರಲ್ಲಿ ಆಯಿತು. ಈ ಎಲ್ಲಾ ಮಾಹಿತಿಗಳು ನನ್ನ ಹತ್ತಿರ ಲಭ್ಯತೆ ಇದೆ. ನಾನು ಅದರ ಬಗ್ಗೆ ಮಾಹಿತಿಯನ್ನು ಕೊಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ...

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಒಂದು ನಿಮಿಷ ತಾಳಿ ಮಾನ್ಯ ದೇಶಪಾಂಡೆಯವರೇ, ನಾನು ತಮ್ಮಲ್ಲಿ ಏನು ಅಪೀಲ್ ಮಾಡಿಕೊಳ್ಳುತ್ತೇನೆಂದರೆ, ಬಹುಶಃ ನಮ್ಮ ಶಾಸನ ಸಭೆಯ ಇತಿಹಾಸದಲ್ಲಿ ಇಂತಹ ಸಂದರ್ಭ ಉದ್ಭವ

ವಾಗಿರುವುದಿಲ್ಲ. ಒಂದು ಉದ್ಯಮಿ ಪ್ರೈವೇಟ್ ಕಂಪನಿಯ ದೌರ್ಜನ್ಯನೋ, ಮೋಸಗಾರಿಕೆಯೋ, ಅಥವಾ ತಂತ್ರಗಾರಿಕೆಯೋ ರಾಜ್ಯಕ್ಕೆ ಕಣ್ಣಿಗೆ ಕಂಡ ಹಾಗೆ ಇಷ್ಟು ದೊಡ್ಡ ಪ್ರಮಾಣದ ನಷ್ಟವಾಗುತ್ತಿದೆ ಎನ್ನುವ ಅಂಕಿ ಅಂಶಗಳು ಸಮೇತ ಅವರು ವಿವರಣೆಯನ್ನು ಮಾಡಿದ್ದಾರೆ. ನಾನು ಇದರ ಬಗ್ಗೆ ಏನು ಹೇಳುತ್ತೇನೆಂದರೆ, ಸರ್ಕಾರ you must take it as a responsibility. ನಿಮಗೇನೂ ಆಸಕ್ತಿ ಇಲ್ಲ. ನಾನು ಏನು ಹೇಳುತ್ತೇನೆಂದರೆ, ನಾವೆಲ್ಲರೂ ಕೂಡ ಸೇರಿ ಇಡೀ ಸದನವು ಒಂದಾಗಿ ಅದೇನು ಇದೆ ಅದರ ಬಗ್ಗೆ ಚರ್ಚೆ ಮಾಡಿ ಸತ್ಯವನ್ನು ಸ್ಥಾಪನೆ ಮಾಡುವ ಬಗ್ಗೆ ಪ್ರಯತ್ನವನ್ನು ಮಾಡೋಣ. ಯಾರನ್ನೂ ಯಾಕೆ ಡಿಫೆಂಡ್ ಮಾಡುವಂತಹದ್ದು ಏನಿದೆ? ನಾನು ಏನು ಹೇಳುತ್ತೇನೆಂದರೆ, ಸರ್ಕಾರದ ಕಡೆ ಎಲ್ಲಾ ಮಾಹಿತಿಗಳು ಇರುತ್ತದೆ. ಇದರ ಬಗ್ಗೆ ನಿಮಗೆ ಸುಲಭವಾಗುತ್ತದೆ. ಇದೊಂದು ವಿಶೇಷವಾದಂತಹ ಸನ್ನಿವೇಶ ಸಂದರ್ಭ. ದಯಮಾಡಿ ಇದರ ಬಗ್ಗೆ ತಾವು ರೆಡಿ ಮಾಡಿ ಕೊಟ್ಟರೆ ಅನುಕೂಲವಾಗುತ್ತದೆ. ನೀವು ಹೇಳಿದ್ದೀರಲ್ಲಾ ಯಾರ್ಯಾರೋ ಯಾವ ಯಾವ ವೇಳೆಗೆ ಏನು ಹೇಳಿದ್ದಾರೆ ಅದರ ಬಗ್ಗೆ ಬೇಕಾದರೆ ನಾವೇ ರೆಡಿ ಮಾಡಿಕೊಳ್ಳುತ್ತೇನೆ. ಲೈಬ್ರರಿಯಲ್ಲಿ ಕುಳಿತು ಆ ಬಗ್ಗೆ ನಾವು ರೆಡಿ ಮಾಡಿಕೊಳ್ಳುತ್ತೇವೆ. ಅಲ್ಲಾ ಅದು ಬೇಡ, ಅದು ರಾಜಕೀಯವಾಗುತ್ತದೆ. ಅಫಿಷಿಯಲ್ ಮೆಟೀರಿಯಲ್ಸ್ ನಿಮ್ಮ ಹತ್ತಿರ ಇರುತ್ತದೆ. ಇದರ ಬಗ್ಗೆ ನೀವು ಸ್ವಲ್ಪ ನೋಟಿಂಗ್ಸ್‌ನ್ನು ನಮಗೆ ಕೊಟ್ಟರೆ ನಿಮ್ಮ ಕೆಲಸವು ಸುಲಭವಾಗುತ್ತದೆ. ದಯಮಾಡಿ ಮಾನ್ಯ ಪ್ರಕಾಶ್‌ರವರು ಮಾಮೂಲಿ ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ಹೇಳಿದ ಹಾಗೆ ಹೇಳುವುದು ಬೇಡ, This is a special Adjournedment motion.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು) : ಈಗಾಗಲೇ ಮಾನ್ಯ ಮಾಧುಸ್ವಾಮಿ ಹಾಗೂ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದಂತೆ ಮಾನ್ಯ ಸದಸ್ಯರಾದ ರಮೇಶ್ ಕುಮಾರ್‌ರವರು ಬಹಳ ಜಾಣ್ಮೆಯಿಂದ ಇದರ ಬಗ್ಗೆ ಬೇರೆ ಬೇರೆ ತರಹ he met it in a different way. ನೀವು ಆಗಲೇ ಮಾತನಾಡಿರುವಂತಹ ಸಂದರ್ಭದಲ್ಲಿ ಪಾಪ ಗೌರವಾನ್ವಿತ ಸದಸ್ಯರಿಗೆ ಹೇಳಿದ್ದೀರಿ. ಯಾರಿಂದ ಪ್ರೇರೇಪಿತರಾಗಿ ಮಾತನಾಡುತ್ತಿದ್ದಾರೆಂದು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು. ಆಗ ನಾವು ಆಕ್ಷೇಪಣೆ ಮಾಡೋಣವೆಂದು ಇದ್ದೆವು. ಇಲ್ಲಾ ಇಲ್ಲಿಯಾದರೂ ಚರ್ಚೆಯಲ್ಲಿ ಬಯಲಿಗೆ ಬರಲಿ ಎಂದು ಇದ್ದೇವೆ. ಯಾರೇ ಮಾತನಾಡಿದರೂ ಕೂಡ ಮತ್ತೊಬ್ಬರಿಂದ

ಪ್ರೇರೇಪಿತರಾಗಿದ್ದಾರೆಂದು ಏತಕ್ಕಾಗಿ ಭಾವಿಸಬೇಕು? ನಮ್ಮದೇ ಆದಂತಹ ಸ್ವಂತ ವಿವೇಚನೆ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನಾನು ಆ ದೃಷ್ಟಿಯಿಂದ ಹೇಳಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಆ ರೀತಿಯ ವ್ಯಂಗ್ಯ ಬೇಕಾಗಿರುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಸೃಷ್ಟಿಕರ್ತರು ನೀವೇ, ಕಾರಣಕರ್ತರು ನೀವೇ, ಇದನ್ನು ಡೆಸ್ಟ್ರಾಯ್ ಮಾಡುವುದಕ್ಕೆ ಹೊರಟವರು ನೀವೇ, ಅದಕ್ಕೆ ನೀವು ಬ್ರಹ್ಮ, ವಿಷ್ಣು, ಮಹೇಶ್ವರರ ಪಾತ್ರವನ್ನು ವಹಿಸುತ್ತಿದ್ದೀರಿ. ಆ ರೀತಿಯಾಗಿ ವಹಿಸಿ ಏನು ಹೇಳುತ್ತಿರೋ ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ : ಜಗತ್ತು ಈ ಮೂವರ ಮೇಲೆ ಅವಲಂಬಿತವಾಗಿದೆ. ಆದ್ದರಿಂದ ಮೂವರು ತಮ್ಮ ತಮ್ಮ ಕರ್ತವ್ಯಗಳನ್ನು ಮಾಡಲೇಬೇಕಾಗಿರುತ್ತದೆ, ಇಲ್ಲದಿದ್ದರೆ ಜಗತ್ತು ನಡೆಯುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಾ ಮೂವರು ನೀವೇ ಆಗಿದ್ದೀರಲ್ಲಾ. ಬ್ರಹ್ಮ ವಿಷ್ಣು, ಮಹೇಶ್ವರ ಅಲ್ಲಿಯೇ ಬಂದಿರುವುದು ತಾಪತ್ರಯ.

ಶ್ರೀ ಎಂ.ಪಿ. ಪ್ರಕಾಶ್ : ನಾವು ಆರೋಪಿಸಲ್ಪಟ್ಟ ಹೆಸರುಗಳಷ್ಟೆ, ಆದರೆ ಸರ್ವಶಕ್ತನು ಆಗಿರುವನು ಒಬ್ಬನೇ, ಅವನನ್ನು ನೀವು ದೇವರು ಎನ್ನಬಹುದು, ಶ್ರೀರಾಮ ಎನ್ನಬಹುದು, ಶಿವ ಎನ್ನಬಹುದು ಏನಾದರೂ ಕೂಡ ಅನ್ನಬಹುದು.

ಶ್ರೀ ವಾಟಾಳ್ ನಾಗರಾಜ್ : ನಾವೆಲ್ಲರೂ ಶಿವಭಕ್ತರು, ಅದು ಶಿವ ಒಬ್ಬನಿಂದಲೇ ಸಾಧ್ಯ. ಅದನ್ನು ನಾವು ನಿಮಗೆ ಹೇಳುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಬ್ರಹ್ಮ, ವಿಷ್ಣು, ಮಹೇಶ್ವರ ಪಾಪ ಅವರು ಮುಗ್ಧರು. ಶ್ರೀಕೃಷ್ಣ ಇದ್ದಾನಲ್ಲಾ, ಅವನು ಬಹಳ ಡೆಂಜರ್.

ಶ್ರೀ ಎನ್.ಚೆಲುವರಾಯಸ್ವಾಮಿ : ಶ್ರೀ ಕೃಷ್ಣನ ಪಾರ್ಟ್‌ನ್ನು ಅವರು ವಹಿಸಿದ್ದಾರಲ್ಲಾ, ಅದಕ್ಕೋಸ್ಕರವೇ ಇಲ್ಲಿ ಚರ್ಚೆಯಾಗುತ್ತಿರುವುದು.

ಅಧ್ಯಕ್ಷರು : ಇದನ್ನು ಈಗ ಮುಗಿಸೋಣ. ಈಗ ಗಮನಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಬೇಕಾಗಿದೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಈ ಒಂದು ವಿಷಯದಲ್ಲಿ ಸರ್ಕಾರ ಎರಡು ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಈ ವಿಚಾರದಲ್ಲಿ ಶ್ರೀಕೃಷ್ಣ ಪರಮಾತ್ಮ ಅಗೋಚರವಾಗಿದ್ದಾನೆ. ಯಾರಿಗೂ ಕಣ್ಣಿಗೆ ಕಾಣಿಸುತ್ತಿಲ್ಲ. ಅವರವರ ದೃಷ್ಟಿಯಲ್ಲಿ ಅವರವರಿಗೆ ಕಾಣುತ್ತಾನೆ. ಎಲ್ಲೋ ಒಂದು ಕಡೆ ಶ್ರೀಕೃಷ್ಣ ಪರಮಾತ್ಮ ಕಾಣುತ್ತಾನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಇದೊಂದು ವಿಷಯದಲ್ಲಿ ಮಾತ್ರ ಸರ್ಕಾರ ಎರಡು ರೀತಿಯಲ್ಲಿ ಉತ್ತರವನ್ನು ಕೊಡಬೇಕಾಗುತ್ತದೆ. ಅಂಗಪಕ್ಷಗಳು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಡುತ್ತಿದ್ದಾರೆ. ನಾವು ಪತ್ರಿಕೆಯನ್ನು ಓದಿ ತಿಳಿದುಕೊಂಡಿದ್ದೇವೆ.

ಅಧ್ಯಕ್ಷರು : ಅವರು ಯಾವ ರೀತಿಯಾಗಿ ಉತ್ತರವನ್ನು ಕೊಡುತ್ತಾರೆಂದು ನೋಡೋಣ. 69ರ ಕೆಳಗಡೆ ನಾಳೆಯ ದಿವಸ ತೆಗೆದುಕೊಳ್ಳೋಣ.

ಶ್ರೀ ಎಂ.ಪಿ.ಪ್ರಕಾಶ್ : ಅವರಿಗೆ ಅಗತ್ಯವಿದ್ದರೆ..

ಅಧ್ಯಕ್ಷರು : ಸುಮ್ಮನೆ ಕಾಲಹರಣ ಮಾಡುವುದು ಬೇಡ. ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ. ಮಾನ್ಯ ಕುಮಾರ ಬಂಗಾರಪ್ಪನವರೇ, ನಿಮ್ಮದು ಹೇಳಿ.

(ಗೊಂದಲ)

9. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು

ವಿಷಯ: ರಾಜ್ಯ ರಸ್ತೆ ಸಾರಿಗೆ ಬಸ್ ದರ ಏರಿಕೆಯ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಈ ರೀತಿಯಾದಂತಹ ಸಾರಿಗೆಯ ಬಸ್ ದರ ಏರಿಕೆ ಮಾಡಿರುವುದು ಮನಸೋ ಇಚ್ಛೆ ಅದು ವೈಜ್ಞಾನಿಕವಾಗಿಲ್ಲ. ಪ್ರಾಮಾಣಿಕವಾಗಿಲ್ಲ. ಕೇಂದ್ರ ಸರ್ಕಾರದವರು ಡಿಸೇಲ್ ಹಾಗೂ ಪೆಟ್ರೋಲ್ ದರವನ್ನು ಏರಿಸಿದ ತಕ್ಷಣ ಇಲ್ಲಿ ಬಸ್ ದರ ಏರಿಕೆಯಾಗುವುದು ರೆಡಿ. ನಿಮಗೆ ಏತಕ್ಕೆ ಭಯ, 12 ಗಂಟೆ ರಾತ್ರಿಯಿಂದ ಹಿಂದೆ 12 ಗಂಟೆ ರಾತ್ರಿ ಎಂದರೆ ಸ್ವಾತಂತ್ರ್ಯದ ನೆನಪು ಬರುತ್ತದೆ. ಇದೇನೂ ಸ್ವಾತಂತ್ರ್ಯವೇ, ನೀವು ಬಸ್ ದರ ಏರಿಕೆ ಮಾಡಿರುವುದು. ಈಗ ಸರ್ಕಾರಿ ಬಸ್ ದರ ಏರಿಕೆ ಮಾಡಿದಿರಿ, ಖಾಸಗಿಯವರು ಬಸ್‌ದರವನ್ನು ಏರಿಸಿದರು. ಇದೇ ರೀತಿಯಾಗಿ ಬಡವರ ಮೇಲೆ ಜನಸಾಮಾನ್ಯರ ಮೇಲೆ ಎಲ್ಲರ ಮೇಲೆ ಅನೇಕ ಸೋರಿಹೋಗುವಂತಹ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡಬೇಕು. ಸೋರಿಹೋಗುವುದರ ಬಗ್ಗೆ ತಡೆಗಟ್ಟಬೇಕು. ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸಬೇಕು. ನೀವು ದರ ಏರಿಕೆಯನ್ನು ನಿಲ್ಲಿಸಬಹುದು. ತಮಿಳುನಾಡಿನಲ್ಲಿ ದರ ಏರಿಕೆ ಇಲ್ಲ, ತಮಿಳುನಾಡು ಕೂಡ ನಮ್ಮ ದೇಶದಲ್ಲಿದೆ, ಅದು ಪಕ್ಕದ ರಾಜ್ಯವಾಗಿದೆ. ಅಲ್ಲಿ ಬಸ್ ದರ ಏರಿಕೆ ಇಲ್ಲ. ಆದರೆ ಇಲ್ಲಿ ನೀವು ಬಸ್ ದರ ಏರಿಸತಕ್ಕಂಥದ್ದು, ತಾವು ಕೊನೆಯವರೆವಿಗೂ ಬಸ್ ದರವನ್ನು ಏರಿಕೆ